# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಮಾರ್ಚ್ 30, 2022

ಸಂಪುಟ : 48 ಸಂಚಿಕೆ : 319 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com










## ಖಾಸಗೀಕರಣ ಪ್ರಕ್ರಿಯೆ ತಕ್ಷಣ ನಿಲ್ಲಿಸಲು ಆಗ್ರಹ

### ಕಾರ್ಮಿಕ ಸಂಘಟನೆಗಳಿಂದ ನಗರದಲ್ಲಿ ಮುಂದುವರೆದ ಎರಡನೇ ದಿನದ ಮುಷ್ಕರ

ದಾವಣಗೆರೆ, ಮಾ.29- ಕೇಂದ್ರ ಸರ್ಕಾರದ ರೈತ, ಕಾರ್ಮಿಕ, ಜನ ವಿರೋಧಿ ಧೋರಣೆ ಖಂಡಿಸಿ, ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಜೆಸಿಟಿಯು ವತಿಯಿಂದ ನಗರದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ ನಂತರ, ಜಯದೇವ ವೃತ್ತದ ಬಳಿ ಬಹಿರಂಗ ಸಭೆ ನಡೆಸಲಾಯಿತು.

ಜೆಸಿಟಿಯು ನೇತೃತ್ವದಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳು ನಗರದ ಪಿ.ಬಿ. ರಸ್ತೆ, ಅಶೋಕ ರಸ್ತೆ, ಲಾಯರ್ ರಸ್ತೆಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆದು, ಜಯದೇವ ವೃತ್ತದ ಬಳಿ ಮುಕ್ತಾಯಗೊಂಡಿತು.

ಈ ವೇಳೆ ಎಐಟಿಯುಸಿ ಜಿಲ್ಲಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ಮಾತನಾಡಿ, 'ದೇಶವನ್ನು ಉಳಿಸಿ, ಕಾರ್ಮಿಕರನ್ನು ರಕ್ಷಿಸಿ' ಎನ್ನುವ ಘೋಷಣೆಯೊಂದಿಗೆ ದೇಶಾದ್ಯಂತ ಸುಮಾರು 25 ಕೋಟಿ ಕಾರ್ಮಿಕರು ಎರಡು ದಿನಗಳ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ನಡೆಸುವ ಮೂಲಕ ಕಾರ್ಮಿಕ ಶಕ್ತಿಯನ್ನು ಪ್ರದರ್ಶಿಸಿದ್ದಾರೆ.

ದೇಶದ ಆಸ್ತಿಗಳಾದ ಬ್ಯಾಂಕು, ವಿಮಾ ಕಂಪನಿಗಳು, ರೈಲ್ವೆ, ವಿದ್ಯುತ್ ಪ್ರಸರಣ ಸಂಸ್ಥೆಗಳು, ಟೆಲಿಕಾಂ, ಮೂಲ ಸೌಕರ್ಯ ಮುಂತಾದ ಸಾರ್ವಜನಿಕ ವಲಯದ ಸಂಸ್ಥೆಗಳನ್ನು ಖಾಸಗೀಕರಣ ಮಾಡುವ ಪ್ರಕ್ರಿಯೆ ಕೂಡಲೇ ನಿಲ್ಲಬೇಕು. ರಾಷ್ಟ್ರೀಯ ಹಣ ಗಳಿಕೆಯ ಪೈಪ್‌ಲೈನ್ (ಎನ್‌ಎಂಪಿ) ರದ್ದುಗೊಳಿಸಬೇಕೆಂದು ಒತ್ತಾಯಿಸಿದರು.

ದೇಶದ ಅಮೂಲ್ಯ ಆಸ್ತಿಯನ್ನು ಬಂಡವಾಳ ಶಾಹಿಗಳಿಗೆ ಮಾರುವ, ಬಂಡವಾಳ ಹಿಂತೆಗೆತ ಮಾಡುವ, ದೀರ್ಘಕಾಲದ ವರೆಗೆ ಖಾಸಗಿಯವರಿಗೆ ಲೀಸ್ ನೀಡುವ ಹುನ್ನಾರ ನಡೆಯುತ್ತಿದೆ. ಇದು ದೇಶದ ಭವಿಷ್ಯದ ಹಿತದೃಷ್ಟಿಯಿಂದ ಅತ್ಯಂತ ಅಪಾಯಕಾರಿಯಾಗಿದೆ ಎಂದು ಹೇಳಿದರು.

ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆವರಗೆರೆ ಹೆಚ್.ಜಿ. ಉಮೇಶ್ ಮಾತನಾಡಿ, ದೇಶದ ಸ್ವಾತಂತ್ರ್ಯದ 75 ನೇ ವರ್ಷದ ಅಮೃತ ಮಹೋತ್ಸವ ಆಚರಿಸುತ್ತಿರುವ ಈ ಸಂದರ್ಭದಲ್ಲೂ ಕಾರ್ಮಿಕರ ಶೋಷಣೆ ಅವ್ಯಾಹತವಾಗಿ ನಡೆಯುತ್ತಿರುವುದು ವಿಷಾದದ ಸಂಗತಿಯಾಗಿದೆ ಎಂದರು.

ಹೆಚ್ಚುತ್ತಿರುವ ನಿರುದ್ಯೋಗ, ಮುಳುಗುತ್ತಿರುವ ಆದಾಯ, ಅಗತ್ಯ ವಸ್ತುಗಳ ಬೆಲೆ ಏರಿಕೆ, ಮಹಿಳೆಯರಿಗೆ ಸುರಕ್ಷತೆ ಮತ್ತು ಭದ್ರತೆ ಇಲ್ಲದಿರುವುದು ಸಂಕಷ್ಟದ ಸಮಯವಾಗಿದೆ. ಈ ಎಲ್ಲಾ ಸಂಕಷ್ಟಗಳು (5ನೇ ಪುಟಕ್ಕೆ)

## ನಿರೀಕ್ಷೆ ಮೀರಿದ ತೆರಿಗೆ ಗುರಿ

### 9,500 ಕೋಟಿ ರೂ.ಗೂ ಹೆಚ್ಚು ತೆರಿಗೆ ಸಂಗ್ರಹ: ಬೊಮ್ಮಾಯಿ



**3ನೇ ತ್ರೈಮಾಸಿಕದಲ್ಲಿ ಕೈಗೊಂಡ ಬಿಗಿ ಕ್ರಮ ಹಾಗೂ ಜಾಗೃತ ದಳವನ್ನು ಚುರುಕುಗೊಳಿಸಿದ ಪರಿಣಾಮ ತೆರಿಗೆ ಸಂಗ್ರಹದಲ್ಲಿ ಏರಿಕೆಯಾಗಿದೆ.**

ಬೆಂಗಳೂರು, ಮಾ. 29 - ಕೋವಿಡ್ ಸಂಕಷ್ಟದಲ್ಲೂ 9,500 ಕೋಟಿ ರೂ. ಹೆಚ್ಚು ತೆರಿಗೆ ಸಂಗ್ರಹವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿಂದು ಪ್ರಕಟಿಸಿದರು.

ಮೋಟಾರು ವಾಹನ ತೆರಿಗೆ ಹೊರ ತುಪಡಿಸಿ ಉಳಿದ ತೆರಿಗೆ ಸಂಗ್ರಹ ನಿಗದಿತ ಗುರಿಗಿಂತ ಹೆಚ್ಚು ಕ್ರೋಢೀಕರಣವಾಗಿದೆ.

ನಮ್ಮ ಆಡಳಿತ ವೈಫಲ್ಯವಾಗಿದ್ದರೆ ಇದು ಸಾಧ್ಯವಾಗುತ್ತಿತ್ತೆ? ಎಂದು ಪ್ರತಿಪಕ್ಷದ ಸದಸ್ಯರನ್ನು ಕೆಣಕಿದ ಮುಖ್ಯಮಂತ್ರಿ ಅವರು, ಕೋವಿಡ್‌ನಿಂದ ಅನೇಕ ಸಂಕಷ್ಟಗಳನ್ನು ಎದುರಿಸಿದ್ದೇವೆ, ಅದರ ನಡುವೆಯೂ ಉತ್ತಮ ಆಡಳಿತ ನೀಡಿ ಸೋರಿಕೆಯನ್ನು ತಡೆಗಟ್ಟಿ ಆದಾಯದ ಗುರಿ ಮುಟ್ಟಿದ್ದೇವೆ ಎಂದಿದ್ದಾರೆ.

ವಿವಿಧ ಇಲಾಖೆಗಳ ಅನುದಾನ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಉತ್ತರಿಸಿದ ಮುಖ್ಯಮಂತ್ರಿ, 7,500 ಕೋಟಿ ರೂ. ಹೆಚ್ಚು ತೆರಿಗೆ ಸಂಗ್ರಹ ನಿರೀಕ್ಷೆಯಿತ್ತು, 9,500 ಕೋಟಿ ರೂ. ನಷ್ಟು ತೆರಿಗೆ ಸಂಗ್ರಹವಾಗಿದೆ ಎಂದರು.

2021-22ನೇ ಸಾಲಿನಲ್ಲಿ 1,19,552 ಕೋಟಿ ರೂ. ಆದಾಯ ಸಂಗ್ರಹದ ಗುರಿಯಿತ್ತು. 3ನೇ ತ್ರೈಮಾಸಿಕದಲ್ಲಿ ಕೈಗೊಂಡ ಬಿಗಿ ಕ್ರಮ ಹಾಗೂ ಜಾಗೃತ ದಳವನ್ನು ಚುರುಕುಗೊಳಿಸಿದ ಪರಿಣಾಮ ತೆರಿಗೆ ಸಂಗ್ರಹದಲ್ಲಿ ಏರಿಕೆಯಾಯಿತು.

ಗೋವಾ ಮತ್ತಿತರೆ ಕಡೆಗಳಿಂದ ಬರುತ್ತಿದ್ದ ಸೆಕೆಂಡ್ಸ್ ಮದ್ಯವನ್ನು ತಡೆಗಟ್ಟಿದ್ದರಿಂದ 2000 ಕೋಟಿ ರೂ. ಗೂ ಹೆಚ್ಚು (2ನೇ ಪುಟಕ್ಕೆ)

## ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಶೇ.70ರ ಮೀಸಲಾತಿಗೆ ನೀತಿ

ಬೆಂಗಳೂರು, ಮಾ. 29- ರಾಜ್ಯದಲ್ಲಿ ಸ್ಥಾಪನೆಯಾಗುವ ಕೈಗಾರಿಕೆಗಳು ಹಲವು ಶ್ರೇಣಿಯ ಹುದ್ದೆಗಳಲ್ಲಿ ಸ್ಥಳೀಯರಿಗೆ ಶೇ.70ರಷ್ಟು ಮೀಸಲಾತಿ ನೀಡಬೇಕು ಎಂದು 2020-25ರ ಕೈಗಾರಿಕಾ ನೀತಿಯಲ್ಲಿ ನಿಯಮ ರೂಪಿಸಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಚಿದಾನಂದಗೌಡರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಶೇ. 10 ರಷ್ಟು (5ನೇ ಪುಟಕ್ಕೆ)

## ಒಂದು ರಾಜ್ಯ ಒಂದು ಕ್ರೀಡೆ ಬಗ್ಗೆ ಇನ್ನು ನಿರ್ಧಾರವಿಲ್ಲ

ನವದೆಹಲಿ, ಮಾ. 29- ಒಂದು ರಾಜ್ಯ ಒಂದು ಕ್ರೀಡೆ ಯೋಜನೆಗೆ ಸಂಬಂಧಿಸಿದಂತೆ ರಾಜ್ಯಗಳ ಜೊತೆ ಚರ್ಚೆ ನಡೆಸಲಾಗುತ್ತಿದೆ. ಆದರೆ ಇದುವರೆಗೂ ಯಾವುದೇ ನಿರ್ಧಾರಕ್ಕೆ ಬಂದಿಲ್ಲ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ತಿಳಿಸಿದೆ.

ಲೋಕಸಭೆಯಲ್ಲಿ ಹೇಳಿಕೆ ನೀಡಿರುವ ಕ್ರೀಡಾ ಖಾತೆ ಅಧೀನ ಸಚಿವ ನಿಸಿತ್ (5ನೇ ಪುಟಕ್ಕೆ)

## ಧರ್ಮಗ್ರಂಥಗಳ ಅಧ್ಯಯನ ಮಾಡಿ

### ಕೆಟ್ಟ ಅಂಶಗಳಿದ್ದರೆ ಅರಬ್ಬೀ ಸಮುದ್ರಕ್ಕೆ ಬಿಸಾಕಿ: ಸಿ.ಟಿ. ರವಿ

ಬೆಂಗಳೂರು, ಮಾ. 30 – ಧರ್ಮಗ್ರಂಥಗಳನ್ನು ಅಧ್ಯಯನಕ್ಕೆ ಒಳಪಡಿಸಿ. ಒಳ್ಳೆಯ ಅಂಶಗಳಿದ್ದರೆ ಅಳವಡಿಸಿಕೊಳ್ಳಿ, ಕೆಟ್ಟ ಅಂಶಗಳಿದ್ದರೆ ಅರಬ್ಬೀ ಸಮುದ್ರಕ್ಕೆ ಬಿಸಾಕಿ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.



ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಭಗವದ್ಗೀತೆಯನ್ನು ಅಧ್ಯಯನಕ್ಕೆ ಒಳಪಡಿಸಲು ನನ್ನ ಯಾವುದೇ ಅಭ್ಯಂತರ ಇಲ್ಲ. ಅದನ್ನು ಹೇಳುವ ಧೈರ್ಯ ನನಗಿದೆ ಎಂದವರು ಹೇಳಿದ್ದಾರೆ.

ನನ್ನ ಧರ್ಮಗ್ರಂಥದಲ್ಲಿ ಕೆಟ್ಟ ಸಂಗತಿ ಇದ್ದರೆ ಅರಬ್ಬೀ ಸಮುದ್ರಕ್ಕೆ ಎಸೆಯಲಿ ಎಂದು ಇನ್ನೊಂದು ಧರ್ಮದವರು ಹೇಳುವ ಧೈರ್ಯ ತೋರಿಸಲಿ. ಆ ರೀತಿ ಹೇಳಿದರೆ, ಅವನನ್ನು ಕೊಂದು ಹಾಕುತ್ತಾರೆ. ಆದರೆ, ನಾನು ಹೇಳಬಲ್ಲೆ. ಏಕೆಂದರೆ ನನ್ನ ನೆಲ ಈ ರೀತಿ ಮಾಡಲು ಅವಕಾಶ ಕೊಟ್ಟಿದೆ ಎಂದು ರವಿ ತಿಳಿಸಿದ್ದಾರೆ.

ಆ ರೀತಿಯ ವಿಚಾರ ಮಾಡಲು ಅವಕಾಶ ಕೊಟ್ಟಿರುವ ಕಾರಣಕ್ಕೆ ಇಲ್ಲಿ ಬಹುತ್ವ ಬೆಳೆದಿದೆ. ಬಹುತ್ವ ಸರ್ವನಾಶ ಮಾಡುವುದು ಏಕತೆಯಲ್ಲ, ಬಹುತ್ವ ಉಳಿಸುವುದು ಏಕತೆ. ಹಿಂದೂಗಳು ಬಹುಸಂಖ್ಯಾತವಾಗಿರುವವರೆಗೆ ಬಹುತ್ವ ಇರುತ್ತದೆ ಎಂದವರು (2ನೇ ಪುಟಕ್ಕೆ)

### ಹಲಾಲ್ ಆರ್ಥಿಕ ಜಿಹಾದ್

**ಹಲಾಲ್ ಅನ್ನುವುದು ಆರ್ಥಿಕ ಜಿಹಾದ್. ಹಲಾಲ್ ಮುಸ್ಲಿಮರ ಧಾರ್ಮಿಕ ಕ್ರಿಯೆ. ಹಲಾಲ್ ಮಾಂಸ ಉಪಯೋಗಿಸುವಂತೆ ಹೇಳುವ ಹಕ್ಕು ಅವರಿಗೆ ಹೇಗಿದೆಯೋ, ಅದನ್ನು ಬಹಿಷ್ಕರಿಸಿ ಎಂದು ಹೇಳುವ ಹಕ್ಕು ನಮಗೂ ಇದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದ್ದಾರೆ.**

**ಮೀನುಗಾರರ ಬಳಿ ಮೀನು ಖರೀದಿಸುವುದು ತಪ್ಪು ಎಂದಾಗ ಯಾಕೆ ಯಾರೂ ಪ್ರಶ್ನಿಸಲಿಲ್ಲ? ಅದಕ್ಕೆ ಪ್ರತಿಕ್ರಿಯೆಗಾಗಿ ಜಾತ್ರೆಯಲ್ಲಿ ಉತ್ತರ ಬಂತು. 2002ರಲ್ಲಿ ಕಾಂಗ್ರೆಸ್ ಪಕ್ಷವೇ ಜಾತ್ರೆ ಕುರಿತು ಸುಗ್ರೀವಾಜ್ಞೆ ಹೊರಡಿಸಿದ ಕಾರಣ ಅವರು ವಿಧಾನಸಭೆಯಲ್ಲಿ ಬಾಯಿ ಮುಚ್ಚಿಕೊಂಡಿದ್ದರು ಎಂದು ರವಿ ಹೇಳಿದರು.**

## ಕೋವಿಡ್‌ನಿಂದ 45 ಸಾವಿರ ಜನರಿಗೆ ಉದ್ಯೋಗ ನಷ್ಟ

ಬೆಂಗಳೂರು, ಮಾ. 29 - ಕೋವಿಡ್ ಕಾರಣದಿಂದ ಕಳೆದ ಎರಡು ವರ್ಷಗಳಲ್ಲಿ 45 ಸಾವಿರ ಮಂದಿ ಉದ್ಯೋಗ ಕಳೆದುಕೊಂಡಿ ದ್ದಾರೆ ಎಂದು ಸಣ್ಣ ಕೈಗಾರಿಕಾ ಸಚಿವ ಎಂ.ಟಿ.ಬಿ.ನಾಗರಾಜ್ ತಿಳಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ಯು.ಬಿ.ವೆಂಕಟೇಶ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, 2020ರಲ್ಲಿ 562, 2021ರಲ್ಲಿ 192 ಸೇರಿ ಒಟ್ಟು 754 ನೋಂದಾಯಿತ ಕಾರ್ಖಾನೆಗಳು ಮುಚ್ಚಿವೆ ಎಂದರು. ಅದೇ ರೀತಿ 92,919 (2ನೇ ಪುಟಕ್ಕೆ)

## ಸಿ.ಯು.ಇ.ಟಿ.ಯಿಂದ ಮಂಡಳಿ ಪರೀಕ್ಷೆಗೆ ಕುಂದಿಲ್ಲ

ನವದೆಹಲಿ, ಮಾ. 29 – ವಿಶ್ವವಿದ್ಯಾನಿಲಯಗಳ ಪ್ರವೇಶಕ್ಕೆ ನಡೆಸಲಾಗುವ ಸಿ.ಯು.ಇ.ಟಿ. (ವಿಶ್ವವಿದ್ಯಾನಿಲಯಗಳ ಸಾಮಾನ್ಯ ಪ್ರವೇಶ ಪರೀಕ್ಷೆ) ಕಾರಣದಿಂದ ಮಂಡಳಿ ಪರೀಕ್ಷೆಗಳ ಪ್ರಾಮುಖ್ಯತೆ ಕಡಿಮೆಯಾಗುವುದಿಲ್ಲ. ಇದರಿಂದಾಗಿ ಕೋಚಿಂಗ್ (2ನೇ ಪುಟಕ್ಕೆ)

**ಕೋಚಿಂಗ್ ಸಂಸ್ಕೃತಿಗೆ ಉತ್ತೇಜನ ನೀಡದೇ ಕೇಂದ್ರ ವಿ.ವಿ.ಗಳಿಗೆ ಪ್ರವೇಶ**

## ಪೆಟ್ರೋಲ್, ಡೀಸೆಲ್ ಹೆಚ್ಚಳ

ನವದೆಹಲಿ,ಮಾ.29– ಮಂಗಳವಾರ ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 80 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು 70 ಪೈಸೆ ಹೆಚ್ಚಿಸಲಾಗಿದೆ. ಕಳೆದ ವಾರದಿಂದ ತೈಲ ಬೆಲೆಯನ್ನು 4.80 ರೂ. ಹೆಚ್ಚಿಸಲಾಗಿದೆ.

ಸ್ಥಳೀಯ ತೆರಿಗೆಗಳಿಗೆ ಅನುಗುಣವಾಗಿ ದೇಶಾದ್ಯಂತ ತೈಲ ಬೆಲೆಯಲ್ಲಿ ವ್ಯತ್ಯಾಸವಾಗಲಿದೆ. ಕಳೆದ ಬಾರಿ ತೈಲ ಬೆಲೆ ಪರಿಷ್ಕರಣೆ ಮಾಡಿದಾಗ ಕಚ್ಚಾ ತೈಲ ಬೆಲೆ 82 ಡಾಲರ್ ಆಗಿತ್ತು. ಈಗ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 112 ಡಾಲರ್ ಆಗಿದೆ.

ರಾಜಸ್ಥಾನದ ಗಂಗಾನಗರದಲ್ಲಿ ಪೆಟ್ರೋಲ್ ಬೆಲೆ ದೇಶದಲ್ಲೇ ಅತಿ ಹೆಚ್ಚಿನ 117.14 ರೂ. ಮತ್ತು ಡೀಸೆಲ್ ಬೆಲೆ 99.96 ರೂ. ಆಗಿದೆ.

## ಕೃಷಿ ಹೊಂಡ ಯೋಜನೆ ಮುಂದುವರೆಸಲು ಪರಿಶೀಲನೆ

ಬೆಂಗಳೂರು, ಮಾ. 29 - ಕೃಷಿ ಹೊಂಡ ಯೋಜನೆ ಮುಂದುವರೆಸುವ ಬಗ್ಗೆ ಪುನರ್ ಪರಿಶೀಲನೆ ನಡೆಸಲಾಗು ವುದು ಎಂದು ಸಿಎಂ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿಂದು ತಿಳಿಸಿದರು.

ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅನುದಾನ ಬೇಡಿಕೆ ಮೇಲೆ ನಡೆದ ಚರ್ಚೆಯಲ್ಲಿ ಉತ್ತರಿಸುವ ಸಂದರ್ಭ ದಲ್ಲಿ ಮಧ್ಯಪ್ರವೇಶಿಸಿ ಮಾತನಾಡಿದ ಅವರು, ಹೊಂಡಗಳಿಂದ (2ನೇ ಪುಟಕ್ಕೆ)

**ಹೊಂಡಗಳಿಂದ ರೈತರಿಗೆ ಅನುಕೂಲ ಮತ್ತು ಅನಾನುಕೂಲದ ಬಗ್ಗೆ ವಿಸ್ತೃತ ವರದಿಯನ್ನು ಕೃಷಿ ವಿವಿಗಳಿಂದ ತರಿಸಿ, ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು**

**- ಬಸವರಾಜ ಬೊಮ್ಮಾಯಿ**

## ಮೆಳ್ಳೇಕಟ್ಟೆ ಭಕ್ತರು ಮಠಕ್ಕೆ ಕೊಟ್ಟ ಜಾಗದಲ್ಲಿ ಹಾಲಿನ ಡೈರಿಗೆ ಮಳಿಗೆ ಕಟ್ಟಿಸಿಕೊಟ್ಟ ಸಿರಿಗೆರೆ ಶ್ರೀ

ದಾವಣಗೆರೆ, ಮಾ.29-ಮಠದ ಹೆಸರಿಗೆ ಬರೆಯಲಾದ ಜಾಗವನ್ನು ಮರಳಿ ಅದೇ ಗ್ರಾಮದ ಹಾಲಿನ ಡೈರಿಗೆ ಹಿಂತಿರುಗಿಸಿದ್ದಲ್ಲದೇ, ಅಲ್ಲಿ ಮಳಿಗೆಯನ್ನು ಕಟ್ಟಿಸಿಕೊಟ್ಟಿರುವ ಶ್ರೀ ತರಳಬಾಳು ಜಗದ್ಗುರುಗಳ ಔದಾರ್ಯವನ್ನು ಗ್ರಾಮಸ್ಥರು ಕೊಂಡಾಡಿ, ಕೃತಜ್ಞತೆ ವ್ಯಕ್ತಪಡಿಸಿದ್ದಾರೆ.



ಸುಮಾರು 50 ವರ್ಷಗಳ ಹಿಂದೆ ಶ್ರೀ ತರಳಬಾಳು ಮಠಕ್ಕೆ ಮೆಳ್ಳೇಕಟ್ಟೆ ಗ್ರಾಮದಲ್ಲಿನ ಜಾಗವನ್ನು ದಾನವಾಗಿ ಬರೆಯಲಾಗಿತ್ತು. ಆಗ ಜಾಗ ಖಾಲಿ ಇತ್ತು. ಗ್ರಾಮದಲ್ಲಿ ಹಾಲಿನ ಡೈರಿಗೆ ಸರಿಯಾದ ಕೊಠಡಿ ಇಲ್ಲದ ಕಾರಣ ಆ ಜಾಗದಲ್ಲಿ ಕೊಠಡಿ ನಿರ್ಮಿಸಿಕೊಡುವಂತೆ ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳಲ್ಲಿ ಸಂಘವು ಮನವಿ ಮಾಡಿತ್ತು. ಮಠದ ಖರ್ಚಿನಿಂದಲೇ ನೂತನ ಕೊಠಡಿ ಕಟ್ಟಿಸಿ ಕೊಡುವುದಕ್ಕೆ ಶ್ರೀಗಳು ಸಮ್ಮತಿಸಿದ್ದರು.

ರೈತರ ಬಾಳಿನ ಆಶಾಕಿರಣ ಎನ್ನುವ ಮಾತಿಗೆ ಸಾಕ್ಷಿಯಾದ ಗುರುಗಳು, ಕೊಠಡಿಯನ್ನು ನಿರ್ಮಿಸಿ ಕೊಡುವ ಮೂಲಕ ಗ್ರಾಮದ ಜನರ ಜೀವನಕ್ಕೆ ಆಧಾರವಾಗಿರುವ ಹಾಲು ಉತ್ಪಾದಕರ ಸಂಘಕ್ಕೆ ದಾರಿದೀಪವಾದರು.

ಜಗದ್ಗುರುಗಳು ಕಳೆದ ಮಾ.26ರ ಶನಿವಾರ ಗ್ರಾಮಕ್ಕೆ ಆಗಮಿಸಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಕಾರ್ಯದರ್ಶಿ ಮತ್ತು ಸದಸ್ಯರು ಹಾಗು ಗ್ರಾಮಸ್ಥರ ಸಮ್ಮುಖದಲ್ಲಿ ಕೊಠಡಿ ಉದ್ಘಾಟನೆ ಮಾಡಿ, ಅಧ್ಯಕ್ಷರ ಕೈಗೆ ಕೊಠಡಿಯ ಕೀಯನ್ನು ಹಸ್ತಾಂತರಿಸಿ, ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಕೊಠಡಿ ನಿರ್ಮಾಣಕ್ಕೆ ಶ್ರಮಿಸಿದ ಸಿ.ಟಿ.ಕುಮಾರ ಮತ್ತು ಸಿ.ಎಂ. ಮಾರುತಿ, ಚನ್ನಬಸಪ್ಪ, ಗುರುಸಿದ್ದಪ್ಪ, ಎಂ.ಎಂ. ಗಿರೀಶ್, ಎ.ಇ.ನಾಗರಾಜ್, ಮಹಿಳಾ ಹಾಲು ಉತ್ಪಾದಕರ ಸಂಘದ ಸದಸ್ಯರು ಹಾಜರಿದ್ದರು.


**ಸಿಟಿ ಸೆಂಟ್ರಲ್ ಹಾಸ್ಪಿಟಲ್ ಪ್ರೈ.ಲಿ.,**

# 17, ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ–02,
Ph. : 08192-253717, 257192-94, Mob : 9972509780

**ಸಾರ್ವಜನಿಕರ ಗಮನಕ್ಕೆ**

ಈ ಮೂಲಕ ಸಂಬಂಧಿಸಿದವರೆಲ್ಲರಿಗೂ ತಿಳಿಯಪಡಿಸುವುದೇನೆಂದರೆ ಸಿಟಿ ಸೆಂಟ್ರಲ್ ಹಾಸ್ಪಿಟಲ್ ಪ್ರೈ., ಲಿಮಿಟೆಡ್ ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ–577 002 ಇದರಲ್ಲಿನ 31ನೇ ಮಾರ್ಚ್ 2018ರ ವರೆಗೆ ದಾಖಲಾಗಿರುವ ಒಳರೋಗಿಗಳ ಕೇಸ್ ಶೀಟುಗಳನ್ನು ಹಾಗೂ ಹೊರ ರೋಗಿ ವಿಭಾಗದ ದಾಖಲೆಗಳನ್ನು ಕಾನೂನಿನ ಮಿತಿಗೆ ಒಳಪಟ್ಟು ವಿಲೇ ಮಾಡಲು ನಿರ್ಧರಿಸಿದ್ದು ಈ ಬಗ್ಗೆ ಅಗತ್ಯ ಮಾಹಿತಿ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಅದನ್ನು 30 ನೇ ಜೂನ್ 2022 ರ ಒಳಗಾಗಿ ಸಲ್ಲಿಸತಕ್ಕದ್ದು. 1ನೇ ಜುಲೈ 2022 ರ ನಂತರ ಮೇಲ್ಕಂಡ ದಾಖಲೆಗಳ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ.

ಇದು ಸಾರ್ವಜನಿಕರ ಅವಗಾಹನೆಗಾಗಿ

ದಿನಾಂಕ : 28–03–2022
ಸ್ಥಳ : ದಾವಣಗೆರೆ

ಆಡಳಿತ ಮಂಡಳಿ
ಸಿಟಿ ಸೆಂಟ್ರಲ್ ಹಾಸ್ಪಿಟಲ್ ಪ್ರೈ.ಲಿ.,
ದಾವಣಗೆರೆ.



॥ ಶ್ರೀ ಆಂಜನೇಯ ಪ್ರಸನ್ನ ॥

**ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ**



ಶ್ರೀಮತಿ ಸುಮಾ ಶಶಿಕಾಂತ ರೆಡ್ಡಿ
ಮೊದಲನೇ ಬಸ್ ಸ್ಟಾಪ್ ಹತ್ತಿರ, ವಿದ್ಯಾನಗರ, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.

ನನ್ನ ಪೂಜ್ಯ ಪತಿಯವರಾದ
**ಡಾ॥ ಎ. ಶಶಿಕಾಂತ ರೆಡ್ಡಿ**
ಇವರು ದಿನಾಂಕ : 19.03.2022ನೇ ಶನಿವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ 'ವೈಕುಂಠ ಸಮಾರಾಧನೆ'ಯನ್ನು ದಿನಾಂಕ : 31.03.2022ನೇ ಗುರುವಾರ ಮಧ್ಯಾಹ್ನ 12.30ಕ್ಕೆ ತರಳಬಾಳು ಸಭಾಭವನ (ಮಿನಿಹಾಲ್) ಅನುಭವ ಮಂಟಪ, ಹದಡಿ ರಸ್ತೆ, ದಾವಣಗೆರೆಯಲ್ಲಿ ನಡೆಸಲು ಗುರು-ಹಿರಿಯರು ತೀರ್ಮಾನಿಸಿರುತ್ತಾರೆ. ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಸುಮಾ ಶಶಿಕಾಂತ ರೆಡ್ಡಿ
ಶ್ರೀಮತಿ ಸುಶೀಲಮ್ಮ ಅನಂತ ರೆಡ್ಡಿ, ಶ್ರೀ ನಿಶ್ಚಯ ಶಶಿಕಾಂತ್
ಶ್ರೀಮತಿ ಜಯಶ್ರೀ ನಿಶ್ಚಯ್, ಶ್ರೀ ಅಕ್ಕೇರ ಕೆಂಚಪ್ಪ ರೆಡ್ಡಿ, ಚಿ. ಅಕ್ಷರ ನಿಶ್ಚಯ್,
ಆಳ್ ವಂಶಸ್ಥರು, ಅಕ್ಕೇರ ವಂಶಸ್ಥರು, ಬಂಧು-ಮಿತ್ರರು. ಫೋ. : 99642 20576

# ಹರಪನಹಳ್ಳಿ ಪುರಸಭೆ ರೂ. 80,40,569 ಉಳಿತಾಯ ಬಜೆಟ್ ಮಂಡನೆ



ಹರಪನಹಳ್ಳಿ, ಮಾ. 2- ಸ್ಥಳೀಯ ಪುರಸಭೆಯ 2022-23ನೇ ಸಾಲಿನ ಆಯ-ವ್ಯಯ ಆರಂಭಿಕ ನಗದು ಮತ್ತು ಬ್ಯಾಂಕ್ ಶಿಲ್ಕು 73,09,414 ಲಕ್ಷ ರೂ., ನಿರೀಕ್ಷಿತ ಆದಾಯ 77,47,91,014 ಸೇರಿದಂತೆ ಒಟ್ಟು ಜಮಾ 78,21,00,428 ಕೋಟಿ ರೂ., ಅದರಲ್ಲಿ ನಿರೀಕ್ಷಿತ ಖರ್ಚು 77,40,59,859 ಕೋಟಿ ರೂ. ಗಳಾಗಿದ್ದು, ಒಟ್ಟು 80,40,569 ಲಕ್ಷ ರೂ. ಗಳ ಉಳಿತಾಯ ಬಜೆಟ್‌ಗೆ ಸಭೆ ಅನುಮೋದನೆ ನೀಡಿತು.

**ನಿರೀಕ್ಷಿತ ಆದಾಯಗಳು :** ವೇತನ ಅನುದಾನ (ಎಸ್‌ಎಫ್‌ಸಿ)-5 ಕೋಟಿ, ಎಸ್‌ಎಫ್‌ಸಿ ಮುಕ್ತ ನಿಧಿ 1ಕೋಟಿ ರೂ., ಎಸ್.ಎಫ್.ಸಿ. ವಿದ್ಯುತ್ ಅನುದಾನ 3.10 ಕೋಟಿ ರೂ., ಎಸ್‌ಎಫ್‌ಸಿ ವಿಶೇಷ ಅನುದಾನ 3 ಕೋಟಿ ರೂ., ನಗರೋತ್ಥಾನ ಅನುದಾನ 10 ಕೋಟಿ ರೂ., ಕೇಂದ್ರ ಸರ್ಕಾರದ (ಡೇ-ನಲ್ಮ್ ಯೋಜನೆ) ಅನುದಾನ 15 ಲಕ್ಷ ರೂ., ಕೇಂದ್ರ ಸರ್ಕಾರದ ಅನುದಾನ (15ನೇ ಹಣಕಾಸು ಯೋಜನೆ) 2.35 ಕೋಟಿ ರೂ., ಸಂಸತ್ ಸದಸ್ಯರ ಅನುದಾನ (ಎಂ.ಪಿ. ಗ್ರಾಂಟ್) 1 ಕೋಟಿ ರೂ., ವಿಧಾನಸಭಾ ಸದಸ್ಯರ ಅನುದಾನ 1 ಕೋಟಿ ರೂ., ಹೈದ್ರಾಬಾದ್ ಕರ್ನಾಟಕದ ವಿಶೇಷ ಅನುದಾನ 2 ಕೋಟಿ ರೂ., ಕೇಂದ್ರ ಮತ್ತು ರಾಜ್ಯ ಸರ್ಕಾರದ ಸ್ವಚ್ಛ ಭಾರತ ಅಭಿಯಾನ ಯೋಜನೆ - 3.50 ಕೋಟಿ ರೂ., ಎಸ್‌ಎಫ್‌ಸಿ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಬಿಡುಗಡೆಯಾಗಬಹುದಾದ ಅನುದಾನ - 75 ಲಕ್ಷ ರೂ., ಮನೆ ಕಂದಾಯ ತೆರಿಗೆ- 1.30 ಕೋಟಿ ರೂ., ಎಸ್‌ಎಫ್‌ಸಿ ಮುಕ್ತನಿಧಿ ಮತ್ತು ಪುರಸಭೆ ಸಾಮಾನ್ಯ ನಿಧಿಯ ಶೇ. 24.10 ರ ಪ.ಜಾ/ಪ.ಪಂ ಕಲ್ಯಾಣ ಕಾರ್ಯಕ್ರಮಗಳಿಗಾಗಿ 32.53 ಲಕ್ಷ ರೂ., ಇತರೆ ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳಿಗಾಗಿ 32.53 ಲಕ್ಷ ರೂ., ಗುತ್ತಿಗೆದಾರ, ಸರಬರಾಜು ತೆರಿಗೆಗಳು, ಆದಾಯ, ವಾಣಿಜ್ಯ ತೆರಿಗೆ, ರಾಜಧನ, ಕಾರ್ಮಿಕ ಕಲ್ಯಾಣ ನಿಧಿ ಸೇರಿದಂತೆ ಇತರೆ ಮೂಲಗಳಿಂದ ಒಟ್ಟು 77,47,91,014 ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದೆ.

**ನಿರೀಕ್ಷಿತ ಖರ್ಚು :** ಸಿಬ್ಬಂದಿ ವೇತನ ವೆಚ್ಚ- 5 ಕೋಟಿ ರೂ., ವಿದ್ಯುತ್ ಅನುದಾನ ವೆಚ್ಚ 3.10 ಕೋಟಿ ರೂ., ಶೇ.24.10 ಯೋಜನೆಯ ವೆಚ್ಚಕ್ಕಾಗಿ 32.53 ಲಕ್ಷ ರೂ., ಗುತ್ತಿಗೆದಾರರ ಠೇವಣಿ ಶುಲ್ಕ 5 ಲಕ್ಷ ರೂ., ಮುಖ್ಯಮಂತ್ರಿಗಳ ನಗರೋತ್ಥಾನ ಅನುದಾನ 10 ಕೋಟಿ ರೂ., ಎಸ್‌ಎಫ್‌ಸಿ ವಿಶೇಷ ಅನುದಾನ 3 ಕೋಟಿ, ಶಾಸಕರ ಅನುದಾನ ವೆಚ್ಚ 1 ಕೋಟಿ ರೂ., ಸಂಸದರ ಅನುದಾನ ವೆಚ್ಚ 1 ಕೋಟಿ ರೂ., ಎಂಎಲ್‌ಸಿ ಅನುದಾನ ವೆಚ್ಚ 1 ಕೋಟಿ ರೂ., ಪೌರ ಕಾರ್ಮಿಕರ ಗೃಹಭಾಗ್ಯ ಯೋಜನೆ ಅನುದಾನ 15 ಲಕ್ಷ ರೂ., ಕೇಂದ್ರ ಸರ್ಕಾರದ 15ನೇ ಹಣಕಾಸು 2.35 ಕೋಟಿ ರೂ., ಹೈದ್ರಾಬಾದ್ ಕರ್ನಾಟಕ ಅನುದಾನ ವೆಚ್ಚ 2 ಕೋಟಿ ರೂ., ಕಾನೂನು ವೆಚ್ಚ 8 ಲಕ್ಷ, ರಾಷ್ಟ್ರೀಯ ಹಬ್ಬಗಳಿಗೆ 3.50 ಲಕ್ಷ ರೂ., ಅತಿವೃಷ್ಟಿಯಿಂದ ಹಾನಿಗೊಳಗಾದವರಿಗೆ ಸಹಾಯ ಧನ 10 ಲಕ್ಷ ರೂ., ನೀರು ಸರಬರಾಜು, ರಾಸಾಯನಿಕ ಖರೀದಿಗಾಗಿ ರಸ್ತೆ ಚರಂಡಿ ಸೇತುವೆ ಅಭಿವೃದ್ಧಿಗಾಗಿ 10.20 ಕೋಟಿ ರೂ., ಕುಡಿಯುವ ನೀರಿನ ಪೈಪ್‌ಲೈನ್ ಮತ್ತು ಟ್ಯಾಂಕರ್ ನಿರ್ಮಾಣಕ್ಕಾಗಿ 2.25 ಕೋಟಿ, ಗುತ್ತಿಗೆದಾರ, ಸರಬರಾಜು ತೆರಿಗೆಗಳು, ಆದಾಯ, ವಾಣಿಜ್ಯ ತೆರಿಗೆ, ರಾಜಧನ, ಕಾರ್ಮಿಕ ಕಲ್ಯಾಣ ನಿಧಿ, ರಸ್ತೆ-ಚರಂಡಿ ಸೇತುವೆ ಕಾಮಗಾರಿ-ಘನ ತಾಜ್ಯ ವಸ್ತು ವಿಲೇವಾರಿ ಘಟಕ ಕಾಮಗಾರಿಗಳಿಗಾಗಿ, ಇತರೆ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಧಿ (ಶೇ.7.25), ವಿಕಲಚೇತನರ ಅಭಿವೃದ್ಧಿ ನಿಧಿ (ಶೇ.5), ಕೊಳಚೆ ಪ್ರದೇಶ ಅಭಿವೃದ್ಧಿಗಾಗಿ ಸೇರಿ, ಒಟ್ಟು 77,40,59,859 ಕೋಟಿ ರೂ. ಖರ್ಚು ಅಂದಾಜಿಸಲಾಗಿದೆ.

ಸದಸ್ಯ ಎಂ.ವಿ. ಅಂಜಿನಪ್ಪ, ಸದಸ್ಯ ಡಿ. ಅಬ್ದುಲ್ ರಹಿಮಾನ್‌ಸಾಬ್, ಸದಸ್ಯ ಹರಾಳು ಹೆಚ್.ಎಂ. ಅಶೋಕ್, ಸದಸ್ಯ ಟಿ. ವೆಂಕಟೇಶ್ ಮತ್ತು ಇತರರು ಅಭಿವೃದ್ಧಿ ವಿಚಾರಗಳ ಕುರಿತಂತೆ ಮಾತನಾಡಿದರು.

ಸಭೆಯಲ್ಲಿ ಉಪಾಧ್ಯಕ್ಷರಾದ ನಿಟ್ಟೂರು ಭೀಮವ್ವ ಸಣ್ಣ ಹಾಲಪ್ಪ, ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್, ಸದಸ್ಯರುಗಳಾದ ಗೊಂಗಡಿ ನಾಗರಾಜ್, ದ್ಯಾಮಜ್ಜಿ ರೊಕ್ಕಪ್ಪ, ಚಿಕ್ಕೇರಿ ಹನುಮಕ್ಕ ಬಸಪ್ಪ, ಜಾಕೀರ್ ಹುಸೇನ್ ಸರ್ಖಾವಸ್, ಎಂ.ಕೆ.ಜಾವೀದ್, ಜೋಗಿನರ ಭರತೇಶ್, ಉದ್ದಾರ ಗಣೇಶ್, ಕೆಂಗಳ್ಳಿ ಪ್ರಕಾಶ್, ರಾಘವೇಂದ್ರ ಶೆಟ್ಟಿ, ರುದ್ರಪ್ಪ, ಯಲ್ಲಮ್ಮ ಲಾಟಿ ದಾದಾಪೀರ್, ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ ಇನ್ನಿತರರು ಉಪಸ್ಥಿತರಿದ್ದರು.

# ಕೃಷಿ ಹೊಂಡ ಯೋಜನೆ ಮುಂದುವರೆಸಲು ಪರಿಶೀಲನೆ

(1ನೇ ಪುಟದಿಂದ ರೈತರಿಗೆ ಅನುಕೂಲ ಮತ್ತು ಅನಾನುಕೂಲದ ಬಗ್ಗೆ ವಿಸ್ತೃತ ವರದಿಯನ್ನು ಕೃಷಿ ವಿವಿಗಳಿಂದ ತರಿಸಿ, ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಒಂದು ತಾಲ್ಲೂಕಿನಲ್ಲಿ ಹೆಚ್ಚು, ಮತ್ತೊಂದು ತಾಲ್ಲೂಕಿನಲ್ಲಿ ಕಡಿಮೆ ಕೃಷಿ ಹೊಂಡ ನಿರ್ಮಾಣವಾಗಿವೆ. ಸರಿಸಮನಾಗಿ ನಿರ್ಮಾಣವಾಗಿಲ್ಲ. ಮಳೆ ಕಡಿಮೆಯಾದ ಪ್ರದೇಶಕ್ಕೆ ಅನುಕೂಲವಾಗಲಿದೆ.

ಈ ಕೃಷಿ ಹೊಂಡ ನಿರ್ಮಾಣ ಮಾಡುವ ಯೋಜನೆ 2019ಕ್ಕೆ ಮುಕ್ತಾಯವಾಗಿದೆ. ಅವಶ್ಯಕತೆ ಇರುವ ಕಡೆ ಕೃಷಿ ಹೊಂಡ ನಿರ್ಮಾಣ ಮಾಡಬಾರದು ಎಂದಿಲ್ಲ. ಅಗತ್ಯವಿರುವ ಕಡೆ ನರೇಗಾ ಯೋಜನೆಯಡಿ ನಿರ್ಮಿಸಬಹುದಾಗಿದೆ ಎಂದರು. ಇದಕ್ಕೂ ಮುನ್ನ ಮಾತನಾಡಿದ ಬಿ.ಸಿ. ಪಾಟೀಲ್, 2014ರಿಂದ 19ರವರೆಗೆ ಕೃಷಿ ಹೊಂಡವನ್ನು ಮಿಷನ್ ಮೋಡ್‌ನಲ್ಲಿ ನಿರ್ಮಿಸಲಾಗಿತ್ತು. ಈಗ ನರೇಗಾ ಯೋಜನೆಯಡಿ ಕೃಷಿ ಹೊಂಡಾ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಲಾಗಿದೆ ಎಂದರು.

ಕೃಷಿಕನನ್ನು ಶಕ್ತಿವಂತನನ್ನಾಗಿ ಮಾಡುವ ಹಲವು ಕಾರ್ಯಕ್ರಮಗಳನ್ನು ರೂಪಿಸಿದ್ದ ಪರಿಣಾಮ ರಾಜ್ಯದಲ್ಲಿ ರೈತ ಆತ್ಮಹತ್ಯೆ ಪ್ರಕರಣಗಳು ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿವೆ.

ಸೂಟು ಬೂಟು ಹಾಕಿಕೊಂಡಿರುವವರೆಲ್ಲರೂ ಇಂದು ಕೃಷಿ ಕಡೆ ಆಕರ್ಷಿತರಾಗುತ್ತಿದ್ದಾರೆ. ನಾವು ಇಲಾಖೆಯಲ್ಲಿ ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸುತ್ತಿರುವ ಪರಿಣಾಮ ಅನ್ನದಾತ ಶಕ್ತಿವಂತನಾಗುತ್ತಿದ್ದಾನೆ ಎಂದವರು ತಿಳಿಸಿದರು.

ಕೃಷಿಕರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕೆ ನಮ್ಮ ಸರ್ಕಾರ ವಿದ್ಯಾರ್ಥಿ ವೇತನವನ್ನು ಕೊಡುತ್ತಿದೆ. 2020-21ರ ಬಜೆಟ್‌ನಲ್ಲಿ ಕೃಷಿ ವಿವಿಗಳಲ್ಲಿ ರೈತರ ಮಕ್ಕಳಿಗೆ ಶೇ.50ರಷ್ಟು ಮೀಸಲಾತಿ ನೀಡಿದ್ದೇವೆ. ಪರಿಣಾಮ 183 ಸೀಟುಗಳು ಲಭ್ಯವಾಗಿವೆ ಎಂದು ಹೇಳಿದರು.

# ಪರೀಕ್ಷೆಗೆ ಕುಂದಿಲ್ಲ

(1ನೇ ಪುಟದಿಂದ ಸಂಸ್ಕೃತಿ'ಗೂ ಉತ್ತೇಜನ ಸಿಗುವುದಿಲ್ಲ ಎಂದು ಯು.ಜಿ.ಸಿ. ಅಧ್ಯಕ್ಷ ಜಗದೀಶ್ ಕುಮಾರ್ ಹೇಳಿದ್ದಾರೆ.

ಮುಂದಿನ ವರ್ಷದಿಂದ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯಾದ ಎನ್.ಟಿ., ವರ್ಷಕ್ಕೆ ಎರಡು ಬಾರಿ ಸಿ.ಯು.ಇ.ಟಿ. ಪರೀಕ್ಷೆ ನಡೆಸಲಿದೆ ಎಂದು ಕುಮಾರ್ ತಿಳಿಸಿದ್ದಾರೆ.

ಸಿ.ಯು.ಇ.ಟಿ. ಕೇವಲ ಕೇಂದ್ರೀಯ ವಿಶ್ವವಿದ್ಯಾನಿಲಯಗಳಿಗೆ ಸೀಮಿತವಲ್ಲ. ಹಲವು ಪ್ರಮುಖ ಖಾಸಗಿ ವಿಶ್ವವಿದ್ಯಾನಿಲಯಗಳೂ ಸಹ ಈ ಪರೀಕ್ಷೆಯ ಅಂಕ ಬಳಸಿ ಪ್ರವೇಶ ನೀಡಲು ಪರಿಶೀಲಿಸುತ್ತಿವೆ ಎಂದವರು ಹೇಳಿದ್ದಾರೆ.

ಈ ವರ್ಷ ಒಂದು ಬಾರಿ ಸಿ.ಯು.ಇ.ಟಿ. ಪರೀಕ್ಷೆ ನಡೆಸಲಾಗುವುದು. ಮುಂದಿನ ವರ್ಷದಿಂದ ಎರಡು ಬಾರಿ ಪರೀಕ್ಷೆ ನಡೆಯಲಿದೆ ಎಂದು ಹೇಳಿದ್ದಾರೆ.

ಕೇಂದ್ರದ 45 ವಿಶ್ವವಿದ್ಯಾನಿಲಯಗಳ ಪ್ರವೇಶಕ್ಕೆ 12ನೇ ತರಗತಿ ಅಥವಾ ಪಿ.ಯು.ಸಿ. ಪರೀಕ್ಷೆಯ ಅಂಕಗಳ ಬದಲು ಸಿ.ಯು.ಇ.ಟಿ. ಅಂಕಗಳನ್ನು ಪರಿಗಣಿಸಲಾಗುವುದು ಎಂದು ಕುಮಾರ್ ಕಳೆದ ವಾರ ಹೇಳಿದ್ದರು.

ಈ ಪರೀಕ್ಷೆ ಬರೆಯಲು ಯಾವುದೇ ಕೋಚಿಂಗ್ ಅಗತ್ಯವಿಲ್ಲ. ಪಿ.ಯು.ಸಿ. ಪಠ್ಯ ಆಧರಿಸಿ ಪರೀಕ್ಷೆ ನಡೆಸಲಾಗುತ್ತದೆ. ಪರೀಕ್ಷೆಗಾಗಿ 11ನೇ ತರಗತಿ ಪಠ್ಯ ಬಳಸುವುದಿಲ್ಲ ಎಂದವರು ಸ್ಪಷ್ಟಪಡಿಸಿದ್ದಾರೆ.

ರಾಜ್ಯ ಮಂಡಳಿಗಳ ವಿದ್ಯಾರ್ಥಿಗಳಿಗೆ ಹಿನ್ನಡೆಯಾಗುವುದಿಲ್ಲ. ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿಗಳು ಸ್ಥಳೀಯ ಭಾಷೆಯ ಪರೀಕ್ಷೆಗಳಲ್ಲಿ ಪಾಲ್ಗೊಳ್ಳಬಹುದು. ಮಂಡಳಿಯ ಪರೀಕ್ಷೆಯ ಫಲಿತಾಂಶವನ್ನು ವಿಶ್ವವಿದ್ಯಾನಿಲಯಗಳು ಅರ್ಹತಾ ಮಾನದಂಡವಾಗಿ ಬಳಸಬಹುದು ಎಂದೂ ಅವರು ಹೇಳಿದ್ದಾರೆ.

# ಗ್ರಂಥಗಳ ಅಧ್ಯಯನ ಮಾಡಿ

(1ನೇ ಪುಟದಿಂದ ಹೇಳಿದರು.

ಗಾಂಧಾರದಲ್ಲಿ ಹಿಂದೂಗಳು, ಬೌದ್ಧರು, ಸಿಖ್ಖರು ಇದ್ದರು. ಇಂದು ಇದ್ದಾರಾ? ಪಾಕಿಸ್ತಾನದಲ್ಲೂ ಹಿಂದೂ, ಬೌದ್ಧ, ಸಿಖ್ಖರು ಇದ್ದರು. ಈಗ ಇದ್ದಾರಾ? ಇದನ್ನು ಅರ್ಥ ಮಾಡಿಕೊಳ್ಳದೇ ಸೋಗಲಾಡಿ ರಾಜಕಾರಣ ಮಾಡುತ್ತಾ ಜಾತ್ಯತೀತ ಎನ್ನುತ್ತಾರೆ. ಆದರೆ, ಹಿಂದೂಗಳು ಇರುವವರೆಗೆ ಜಾತ್ಯತೀತತೆ ಉಳಿಯುತ್ತದೆ ಎಂದವರು ತಿಳಿಸಿದರು. ಗತಕಾಲದ ಯಾವ ಬರ್ಬರತೆ ಪ್ರಚೋದನೆಗೆ ಕಾರಣವಾಯಿತೋ, ಅದೇ ಪ್ರಚೋದನೆ ಮತ್ತೆ ಮುಂದುವರೆಯುತ್ತಿದ್ದರೆ, ಸಮಾಜ ಆ ಬಗ್ಗೆ ಆಲೋಚನೆ ಮಾಡದಿದ್ದರೆ ಸರ್ವನಾಶ ಆಗಿ ಹೋಗುತ್ತೀರಿ ಎಂದವರು ಎಚ್ಚರಿಸಿದರು.

ಆಫ್ಘಾನಿಸ್ತಾನದಲ್ಲಿ ಪತ್ರಕರ್ತರು ಸ್ವತಂತ್ರವಾಗಿ ಪ್ರಶ್ನೆ ಕೇಳಲು ಆಗುತ್ತಾ? ಹತ್ಯೆ ಮಾಡುತ್ತಾರೆ. ಇಂತಹ ಮತಾಂಧತೆಯನ್ನು ಧರ್ಮ ಎನ್ನಲು ಆಗುವುದಿಲ್ಲ. ಧರ್ಮ ಎಂದರೆ ಕರುಣೆ. ಕೊಲ್ಲುವುದು ಧರ್ಮ ಅಲ್ಲ. ಯಾರಾದರೂ ಕೊಲ್ಲುವುದೇ ಧರ್ಮ ಎಂದರೆ ಅದು ಮತಾಂಧತೆ ಎಂದವರು ತಿಳಿಸಿದರು.

# ಜನರಿಗೆ ಉದ್ಯೋಗ ನಷ್ಟ

(1ನೇ ಪುಟದಿಂದ ಉದ್ಯೋಗ ಸೃಷ್ಟಿಯಾಗುವ ಕಾರ್ಖಾನೆಗಳು ಸ್ಥಾಪನೆಯಾಗಿವೆ. ರಾಜ್ಯ ಸರ್ಕಾರ ಸಣ್ಣ ಕೈಗಾರಿಕೆಗಳಿಗೆ ಸಾಕಷ್ಟು ಬೆಂಬಲ ನೀಡುತ್ತಿದೆ. ಕಚ್ಚಾ ಮಾಲಿನ ಕೊರತೆ, ಕಾರ್ಮಿಕರ ಕೊರತೆ, ದುಡಿಯುವ ಬಂಡವಾಳ ಸಮಸ್ಯೆ ಸೇರಿ ಅನೇಕ ಕಾರಣಗಳಿಗೆ ಸಣ್ಣ ಕೈಗಾರಿಕೆಗಳು ತೊಂದರೆಗೆ ಒಳಗಾಗಿವೆ ಎಂದಿದ್ದಾರೆ.

ಸಣ್ಣ ಕೈಗಾರಿಕೆಗಳು ಮಾತ್ರವಲ್ಲ, ಬೃಹತ್ ಉದ್ಯಮಗಳಿಗೂ ಕೂಡ ನಷ್ಟವಾಗಿದೆ. ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್‌ನಲ್ಲಿ 26 ಸಾವಿರ ಜನ ಕೆಲಸ ಮಾಡುತ್ತಿದ್ದರು. ಎನ್.ಜಿ.ಎಫ್.ನಲ್ಲಿ 5 ಸಾವಿರ ಮಂದಿ ಕೆಲಸ ಮಾಡುತ್ತಿದ್ದರು. ಬಹುರಾಷ್ಟ್ರೀಯ ಕಂಪೆನಿಗಳ ಪೈಪೋಟಿ, ತಂತ್ರಜ್ಞಾನ ಬದಲಾವಣೆಯಿಂದ ಭಾರೀ ಕೈಗಾರಿಕೆಗಳೇ ಮುಚ್ಚಿ ಹೋಗಿವೆ. ಅದೇ ರೀತಿ ಸಣ್ಣ ಕೈಗಾರಿಕೆಗಳು ನಷ್ಟ ಅನುಭವಿಸುತ್ತಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗಾರಿಕೆಗಳಿಗೆ ಸಾಕಷ್ಟು ನೆರವು ನೀಡುತ್ತಿವೆ ಎಂದು ಸಚಿವರು ಹೇಳಿದ್ದಾರೆ.

ಕಾರ್ಮಿಕರ ಬಲವರ್ಧನೆಗೆ ಉದ್ಯೋಗ ಕಳೆದುಕೊಂಡವರ ನೆರವಿಗೆ ಕಾರ್ಮಿಕ ಇಲಾಖೆಯಲ್ಲಿ ಯಾವುದೇ ಯೋಜನೆಗಳಿಲ್ಲ. ಆದರೆ ಕಾರ್ಮಿಕರು ತಮ್ಮ ಉಳಿತಾಯದ ಸೌಲಭ್ಯಗಳನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ ಎಂದರು.

# ನಿರೀಕ್ಷೆ ಮೀರಿದ ತೆರಿಗೆ ಗುರಿ

(1ನೇ ಪುಟದಿಂದ ಅಬಕಾರಿ ತೆರಿಗೆ ಸಂಗ್ರಹ ಸಾಧ್ಯವಾಯಿತು.

ಶೇ.10ರಷ್ಟು ಮುದ್ರಾಂಕ ಶುಲ್ಕ ರಿಯಾಯಿತಿ ನೀಡಿದ್ದರಿಂದ 1000 ಕೋಟಿ ರೂ. ಅಧಿಕ ತೆರಿಗೆ ಸಂಗ್ರಹ ವಾಗಿದೆ. ತೆರಿಗೆಯೇತರ ಆದಾಯವನ್ನು 4 ಸಾವಿರ ಕೋಟಿ ರೂ.ಗೆ ನಿಗದಿ ಮಾಡಲಾಗಿತ್ತು, 6 ಸಾವಿರ ಕೋಟಿ ರೂ. ಸಂಗ್ರಹವಾಗಿದೆ. ಕಬ್ಬಿಣದ ಅದಿರು ಮಾರಾಟದಿಂದ 500 ಕೋಟಿ ರೂ. ಸಂಗ್ರಹವಾಯಿತು. ಗಣಿಗಾರಿಕೆಗೆ ಅನುಕೂಲ ಮಾಡಿಕೊಟ್ಟಿದ್ದ ರಿಂದ, ತೆರಿಗೆಯೇತರ ಆದಾಯ ಸಂಗ್ರಹಿಸಲು ಸಾಧ್ಯವಾಯಿತು.

2022-23ನೇ ಆರ್ಥಿಕ ಸಾಲಿನಲ್ಲಿ 10 ಸಾವಿರ ಕೋಟಿ ರೂ.ಗೂ ಹೆಚ್ಚು ತೆರಿಗೆಯೇತರ ಆದಾಯ ಹೊಂದುವ ಗುರಿ ಹೊಂದಿದ್ದೇವೆ. ತೆರಿಗೆಯೇತರ ಆದಾಯ ಹೆಚ್ಚಿಸಬೇಕು. ಅನಾವಶ್ಯಕ ವೆಚ್ಚವನ್ನು ತಗ್ಗಿಸಬೇಕು. ಇಲ್ಲದಿದ್ದರೆ ಜನರ ಮೇಲೆ ಆರ್ಥಿಕ ಹೊರೆ ಬೀಳಲಿದೆ ಎಂದರು.

2021-22ನೇ ಸಾಲಿನಲ್ಲಿ 67,100 ಕೋಟಿ ರೂ. ಸಾಲ ಪಡೆಯುವ ಅವಕಾಶವಿದ್ದರೂ 63,100 ಕೋಟಿ ರೂ. ಸಾಲ ಪಡೆದು, 4 ಸಾವಿರ ಕೋಟಿ ರೂ.ನಷ್ಟು ಕಡಿಮೆ ಸಾಲ ಮಾಡಿದ್ದೇವೆ ಎಂದು ಸಮರ್ಥಿಸಿಕೊಂಡರು.

ವಿತ್ತೀಯ ಕೊರತೆಯನ್ನು ಒಂದೆರಡು ವರ್ಷದಲ್ಲಿ ನಿವಾರಿಸಿ, ಆದಾಯ ಹೆಚ್ಚಳಕ್ಕೆ ಆದ್ಯತೆ ನೀಡುತ್ತೇವೆ, ನಂತರ ಉಳಿತಾಯ ಬಜೆಟ್ ಮಂಡಿಸಬಹುದಾಗಿದೆ ಎಂದರು.

2022-23ರಲ್ಲಿ ಗುರಿ ದೊಡ್ಡ ಪ್ರಮಾಣದಲ್ಲಿದ್ದು, ಮೊದಲ ತಿಂಗಳಿ ನಿಂದಲೇ ಬಿಗಿ ಕ್ರಮ ಕೈಗೊಂಡು ಆಧುನೀ ಕರಣ, ಡಿಜಿಟಲೈಜೇಷನ್, ಹೊಸ ನಿಯಮ ಜಾರಿ, ಜಿಎಸ್‌ಟಿ ಸೋರಿಕೆ ತಡೆಯುವುದು ಮೊದಲಾದವುಗಳ ಮೂಲಕ ಗುರಿ ಮೀರಿದ ಆದಾಯ ಗಳಿಸುವ ವಿಶ್ವಾಸವಿದೆ. ಜಿಎಸ್‌ಟಿ ಪಾವತಿಸದ ಸಂಸ್ಥೆಗಳ ಮೇಲೆ ದಾಳಿ ಮಾಡಿದ್ದೇವೆ, 20 ರಿಂದ 25 ಕಂಪನಿಗಳನ್ನು ತೆರೆದು, ಜಿಎಸ್‌ಟಿ ಪಾವತಿಸದೆ ವ್ಯಕ್ತಿಯೊಬ್ಬ ತಪ್ಪಿಸಿಕೊಂಡಿರುವುದು ಗಮನಕ್ಕೆ ಬಂದಿದೆ. ಇದೆಲ್ಲದರ ಹಿನ್ನೆಲೆಯಲ್ಲಿ ಮುಂದಿನ ವರ್ಷಕ್ಕೆ ಆದಾಯ ಹೆಚ್ಚಳಕ್ಕೆ ಗಮನಹರಿಸಲಾಗುವುದು ಎಂದರು.

2021-22ನೇ ಸಾಲಿನಲ್ಲಿ ಮೊದಲ 5 ತಿಂಗಳಲ್ಲಿ 5 ಸಾವಿರ ಕೋಟಿ ರೂ. ಕಡಿಮೆ ಆದಾಯ ಸಂಗ್ರಹವಾಗಿತ್ತು, ಅಧಿಕಾರಿಗಳು ಬಜೆಟ್ ಗಾತ್ರ ತಗ್ಗಿಸುವಂತೆ ಸಲಹೆ ಮಾಡಿದ್ದರು, ಆದರೂ, 2022-23ರ ಬಜೆಟ್ ಗಾತ್ರ 2,65,720 ಕೋಟಿ ರೂ. ಆಗಿದ್ದು, ಕಳೆದ ವರ್ಷಕ್ಕಿಂತ ಶೇ.7.9ರಷ್ಟು ಹೆಚ್ಚಾಗಿದೆ. 14,129 ಕೋಟಿ ರೂ. ಸಾಲ ಮರುಪಾವತಿಗೆ ಮೀಸಲಿಡಲಾಗಿದೆ, ಒಟ್ಟಾರೆ ರಾಜಸ್ವ ಸ್ವೀಕೃತಿ ಶೇ.10.23ರಷ್ಟು ಹೆಚ್ಚಾಗಿದೆ ಎಂದು ವಿವರಿಸಿದರು.

ಜಿಎಸ್‌ಟಿ ಪರಿಹಾರ ಜೂನ್‌ಗೆ ಅಂತ್ಯವಾಗಿರುವುದರಿಂದ ಅದನ್ನು ಬಜೆಟ್‌ನಲ್ಲಿ ಪರಿಗಣಿಸಲಾಗಿಲ್ಲ, ಒಟ್ಟು ಸಾಲದ ಹೊಣೆಗಾರಿಕೆ 5,18,366 ಕೋಟಿ ರೂ. ಆಗಿದೆ. 14 ಸಾವಿರ ಕೋಟಿ ರೂ.ನಷ್ಟು ರಾಜಸ್ವ ಕೊರತೆ ಅಂದಾಜು ಮಾಡಲಾಗಿದೆ, ಅದನ್ನು ಮತ್ತಷ್ಟು ಕಡಿತಗೊಳಿಸಲಾಗುವುದು.

ಎಸ್‌ಟಿಎಸ್‌ಪಿಎಸ್‌ಇ ಯೋಜನೆಯಡಿ ಕಳೆದ ವರ್ಷಕ್ಕಿಂತ 2200 ಕೋಟಿ ರೂ. ಒದಗಿಸಲಾಗಿದೆ. ಅನಾವಶ್ಯಕ ವೆಚ್ಚ ತಗ್ಗಿಸಿ, ಆದಾಯ ಹೆಚ್ಚಿಸಿ, ಆರ್ಥಿಕ ಶಿಸ್ತು ತಂದು ಆಡಳಿತ ಸುಧಾರಣೆ ಮಾಡಲು ಬದ್ಧರಾಗಿದ್ದೇವೆ ಎಂದು ಹೇಳಿದರು. ಕಳೆದ ಎರಡು ವರ್ಷಗಳಿಂದ ಕೋವಿಡ್‌ನಿಂದಾಗಿ ಆರ್ಥಿಕ ಬೆಳವಣಿಗೆ ಕುಂಠಿತವಾಗಿತ್ತು. 15 ಸಾವಿರ ಕೋಟಿ ರೂ.ನಷ್ಟು ಕೋವಿಡ್ ಮತ್ತಿತರೆ ಬಾಬ್ತುಗಳಿಗೆ ವೆಚ್ಚ ಮಾಡಲಾಗಿದೆ ಎಂದರು.

# ಮಲೇಬೆನ್ನೂರು : ಗೊಂದಲದ ಗೂಡಾದ ಬಹಿರಂಗ ಹರಾಜು



ಮಲೇಬೆನ್ನೂರು, ಮಾ.29- ಇಲ್ಲಿನ ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಮಂಗಳವಾರ ನಡೆದ ವಾರದ ಸಂತೆ ಹಾಗೂ ದಿನವಹಿ ಸಂತೆಯ ಬಹಿರಂಗ ಹರಾಜು ಮತ್ತು ಕುರಿ, ಕೋಳಿ ಮಟನ್ ಮಾರುಕಟ್ಟೆಗಳ ಬಹಿರಂಗ ಹರಾಜು ವಾಗ್ವಾದ, ಗದ್ದಲ - ಗೊಂದಲಗಳ ಗೂಡಾಗಿತ್ತು.

ಪುರಸಭೆ ಮುಖ್ಯಾಧಿಕಾರಿ ಶ್ರೀಮತಿ ರುಕ್ಮಿಣಿ ಅವರ ನೇತೃತ್ವದಲ್ಲಿ ನಡೆದ ಬಹಿರಂಗ ಹರಾಜು ಸಭೆಯ ಆರಂಭದಲ್ಲಿ ಹಿರಿಯ ಆರೋಗ್ಯ ನಿರೀಕ್ಷಕ ರವಿ ಪ್ರಕಾಶ್ ಅವರು ಹರಾಜಿನ ಷರತ್ತುಗಳನ್ನು ಓದಿ ತಿಳಿಸಿದರು.

ಷರತ್ತುಗಳನ್ನು ಓದುತ್ತಿರುವಾಗಲೇ ವರ್ತಕರು ಈ ಹಿಂದೆ ಹರಾಜಿನಲ್ಲಿ ಮಳಿಗೆ ಹಾಗೂ ಸಂತೆ ಹರಾಜು ಪಡೆದು, ಕೋವಿಡ್ ಲಾಕ್‌ಡೌನ್‌ನಿಂದ ಬಹಳ ನಷ್ಟವಾಗಿದೆ. ಬಂದ್ ಮಾಡಲಾಗಿದ್ದ ದಿನಗಳನ್ನು ಮುಂದುವರೆಸಿ ಕೊಟ್ಟಿಲ್ಲ ಎಂದು ಗದ್ದಲ ಮಾಡಿದರು.

ಇದರ ನಡುವೆಯೂ 2022-23 ನೇ ಸಾಲಿನ ಕುರಿ-ಕೋಳಿ ಮಟನ್ ಮಾರುಕಟ್ಟೆಯ 16 ಮಳಿಗೆಗಳು 8,36,700 ರೂ.ಗಳಿಗೆ ಬಿಡ್ ಆದವು. ಆದರೆ 2021-22ನೇ ಸಾಲಿನ ಬಿಡ್ ಮೊತ್ತಕ್ಕೆ 2 ಲಕ್ಷ ರೂ. ಕಡಿಮೆ ಬಿಡ್ ಆಗಿದ್ದರಿಂದ ಈ ಬಗ್ಗೆ ಆಡಳಿತಾಧಿಕಾರಿಗಳಾದ ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್ ಅವರು ಅನುಮೋದಿಸಿದ ನಂತರ ಬಿಡ್‌ದಾರರ ಹೆಸರು ಪ್ರಕಟಿಸುವುದಾಗಿ ಮುಖ್ಯಾಧಿಕಾರಿ ಶ್ರೀಮತಿ ರುಕ್ಮಿಣಿ ತಿಳಿಸಿದರು. ವಾರದ ಸಂತೆ ಮತ್ತು ದಿನವಹಿ ಸಂತೆಯ ಬಹಿರಂಗ ಹರಾಜಿನಲ್ಲೂ ಕೂಡಾ ಭಾರೀ ವ್ಯತ್ಯಾಸ ಆಗಿದೆ.

**ಕಳೆದ ಬಾರಿಗಿಂತ ಕಡಿಮೆ ಮೊತ್ತಕ್ಕೆ ಬಿಡ್ ಕರೆದ ವರ್ತಕರು**

2022-23 ನೇ ಸಾಲಿನ ವಾರದ ಸಂತೆ ಬಿಡ್ ಮೊತ್ತ 2 ಲಕ್ಷ ರೂ. ಮಾತ್ರ ಆಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ 1.55 ಲಕ್ಷ ರೂ. ಕಡಿಮೆ ಆಗಿದೆ. ದಿನವಹಿ ಸಂತೆ ಬಿಡ್ ಮೊತ್ತ 1.50 ಲಕ್ಷ ರೂ. ಆಗಿದ್ದು, ಕಳೆದ ವರ್ಷಕ್ಕಿಂತ 91 ಸಾವಿರ ರೂ. ಕಡಿಮೆ ಬಿಡ್ ಆಗಿದೆ.

ಸಭೆಯಲ್ಲಿ ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಸಿ. ಅಬ್ದುಲ್ ಮಜೀದ್, ಬಿ. ಮಂಜುನಾಥ್, ಖಲೀಲ್, ಭೋವಿ ಶಿವು, ಬೆಣ್ಣೆಹಳ್ಳಿ ಸಿದ್ದೇಶ್, ನಯಾಜ್, ದಾದಾಪೀರ್, ಟಿ. ಹನುಮಂತಪ್ಪ, ಟಿ. ವಾಸಣ್ಣ, ಎ.ಕೆ. ಲೋಕೇಶ್ ಮತ್ತು ಕೆ.ಪಿ. ಗಂಗಾಧರ್, ಜಿಗಳೇರ ಹಾಲೇಶಪ್ಪ, ಓ.ಜಿ. ಕುಮಾರ್, ಯುಸೂಫ್, ಬಿ. ಸುರೇಶ್, ಬರ್ಕತ್ ಅಲಿ, ಚಮನ್ ಷಾ, ಎಂ.ಬಿ. ರುಸ್ತುಂ. ಮುನೀರ್ ಸಾಬ್, ಪುರಸಭೆ ಅಧಿಕಾರಿಗಳಾದ ದಿನಕರ್, ಗಣೇಶ್, ಪ್ರಭು, ಉಮೇಶ್, ಪ್ರವೀಣ್ ಹಾಜರಿದ್ದರು.


## ದ್ವಿತೀಯ ವರ್ಷದ ಪುಣ್ಯಸ್ಮರಣೆ



ಶ್ರೀ ಎಂ.ಕೆ. ಪ್ರಕಾಶ್ ಇವರ ಧರ್ಮಪತ್ನಿಯಾದ

**ದಿ|| ಶ್ರೀಮತಿ ಎಂ.ಪಿ. ಜಯಶೀಲ**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು...
ನಿಮ್ಮ ನೆನಪುಗಳೇ ನಮಗೆ ದಾರಿ ದೀಪವಾಗಿವೆ.
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಶ್ರೀ ಕೆ.ಎಂ. ಪ್ರಕಾಶ್ ಮತ್ತು ಮಕ್ಕಳು
**ಜೆ.ಪಿ. ಎಂಟರ್‌ಪ್ರೈಸಸ್ ಸಿಬ್ಬಂದಿ ವರ್ಗ**
ಹಾಗೂ ಬಂಧು-ಮಿತ್ರರು

## ಎರಡನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಬಸವಲಿಂಗಮ್ಮ**
(ದಿ. ಅಂಗಡಿ ಮಹೇಶ್ವರಪ್ಪ ಇವರ ಧರ್ಮಪತ್ನಿ)
ನಿಧನ - 30.03.2020

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ಸದಾ ನಿಮ್ಮ ಸವಿ ನೆನಪಿನಲ್ಲಿರುವ...

**ಮಕ್ಕಳಾದ : ಕೆ.ಎಂ. ಮಂಜುನಾಥ್, ಎ.ಎಂ. ಚಂದ್ರಪ್ಪ ಎ.ಎಂ. ರುದ್ರೇಶ್, ಎ.ಎಂ. ಕುಬೇರಪ್ಪ, ಕೆ.ಎಂ. ಪ್ರಕಾಶ್, ಶ್ರೀಮತಿ ಶಾರದಮ್ಮ, ಶ್ರೀಮತಿ ಶಿವಮ್ಮ, ಶ್ರೀಮತಿ ಜಯಮ್ಮ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಂಗಡಿ ವಂಶಸ್ಥರು, ಕೋಲ್ಕುಂಟೆ, ದಾವಣಗೆರೆ ತಾಲ್ಲೂಕು**

|| ಶ್ರೀ ಮರಳಸಿದ್ದೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾ|| ಜಿ|| ಆಲೂರು ಗ್ರಾಮದ ವಾಸಿ
**ಶ್ರೀ ಹಲಗೇರಿ ನಾಗರಾಜಪ್ಪ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 18.03.2022ನೇಯ ಶುಕ್ರವಾರ 3.25ಕ್ಕೆ ನಮ್ಮ ತಾಯಿಯವರಾದ
**ಶ್ರೀ ಹಲಗೇರಿ ಬಸಪ್ಪ**
ಇವರ ಧರ್ಮಪತ್ನಿ

**ಶರಣೆ ಶ್ರೀಮತಿ ಹಲಗೇರಿ ನಾಗಮ್ಮ (ಆಲೂರು ಚೌಡಜ್ಜಿ)**
ಇವರು ಲಿಂಗೈಕ್ಯರಾದ ಪ್ರಯುಕ್ತ ಅವರ ಆತ್ಮಶಾಂತಿಗಾಗಿ
**"ಕೈಲಾಸ ಶಿವಗಣಾರಾಧನೆ" ಯನ್ನು**
**ದಿನಾಂಕ : 30.03.2022ನೇ ಬುಧವಾರ ಬೆಳಿಗ್ಗೆ 10.30 ರಿಂದ ಮೃತರ ಸ್ವಗೃಹ ಆಲೂರು ಗ್ರಾಮದಲ್ಲಿ** ನೆರವೇರಿಸಲು ತೀರ್ಮಾನಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
**ಶ್ರೀಮತಿ ಹನುಮಕ್ಕ ಮತ್ತು ಮಕ್ಕಳು, ಆಲೂರು., ಶ್ರೀಮತಿ ಗೌರಮ್ಮ ಮತ್ತು ಮಕ್ಕಳು, ಆಲೂರು. ಹಲಗೇರಿ ವಂಶಸ್ಥರು, ಆಲೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಫೋ. : 97417 05081, 91649 11419**

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ


# ಹರಿಹರದಲ್ಲಿ ಇಂದಿನಿಂದ ಉರುಸ್

ಹರಿಹರ, ಮಾ. 29 - ನಗರದ ಹಳೆ ಪಿ.ಬಿ. ರಸ್ತೆಯ ತುಂಗಭದ್ರಾ ನದಿ ದಂಡೆಯ ಪಕ್ಕದಲ್ಲಿರುವ ಹಜರತ್ ಸೈಯದ್ ನಾಡಬಂದ್ ಷಾ ವಲಿ ಖಾದ್ರಿ ದರ್ಗಾದಲ್ಲಿ ಸಂದಲ್ ಓ ಉರಸ್ ಕಾರ್ಯಕ್ರಮವು ನಾಳೆ ದಿನಾಂಕ 30 ರಿಂದ ಏಪ್ರಿಲ್ 1 ರವರಿಗೆ ಅದ್ದೂರಿಯಾಗಿ ನಡೆಯಲಿದೆ ಎಂದು ಹಜರತ್ ಸೈಯದ್ ನಾಡಬಂದ್ ಷಾ ವಲಿ ಖಾದ್ರಿ ದುರ್ಗಾ ಸಮಿತಿಯ ಅಧ್ಯಕ್ಷ ಅಹಮದ್ ಖಾನ್ ತಿಳಿಸಿದರು.

ದರ್ಗಾದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬುಧವಾರ ಮಧ್ಯಾಹ್ನ 2 ಗಂಟೆಗೆ ಆಸೀಫ್ ಉಲ್ಲಾ ಖಾನ್ ಸದರ್ ಮತ್ತು ಪೇಂಟರ್ ಗೌಸ್ ಸಾಬ್ ಹಜರತ್ ಪ್ಯಾರೇಜಾನ್, ಐಲಿಫಾಯೇ ಸತ್ತಾರ್ ಸಾಬ್ ಮಕಾನ್ ದಾರ್ ಮುಷಾಹಿಕ್, ಫಕೀರ್ ಸಮ್ಮುಖದಲ್ಲಿ ಗಲೇಫ್ ಮತ್ತು ಸಂದಲ್ ದರ್ಗಾದಿಂದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟು ರಾತ್ರಿ 9 ಗಂಟೆಗೆ ಫಕೀರರ ಜರಬ್ ಜರುಗುವುದು. ದರ್ಗಾಕ್ಕೆ ಆಗಮಿಸಿ ಗಲೇಫ್ ಹೊದಿಸಿ ಗಂಧ ಹಚ್ಚುವ ಕಾರ್ಯಕ್ರಮ ಮತ್ತು ಫಾತೇಹಾ ಮಾಡಲಾಗುವುದು.

ದಿನಾಂಕ 31 ರ ಗುರುವಾರ ರಾತ್ರಿ 10 ಕ್ಕೆ ಪ್ರಸಿದ್ಧ ಖವ್ವಾಲರುಗಳಾದ ಮೈಸೂರಿನ ತೋಸಿಫ್ ಚಿಸ್ತಿ, ಹಾಗೂ ಬೆಂಗಳೂರು ನಿಜಾಮ್ ನವಾಬ್ ಖಾದ್ರಿ, ಸೈಯದ್ ಅತಾವುಲ್ಲಾ ಷಾ ಅಲ್ ಮಾರುಫ್ ಪೀರ್ ಪಾಷಾ ಹುಬ್ಬಳ್ಳಿ, ಹಜರತ್ ಸೂಫಿ ಷಾ ಕಲೀಮುಲ್ಲಾ ಷಾ ಖಾದ್ರಿ ಕೆ ಷಹಜದ್ ಶಬ್ಬೀರ್ ಆಹ್ಮದ್, ಷಾ ಖಾದ್ರಿ ಗೋನಾಳ್ ಇವರಿಂದ ಖವ್ವಾಲಿ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎನ್. ಹೆಚ್. ಶ್ರೀನಿವಾಸ್ ನಂದಿಗಾವಿ, ಮಾಜಿ ವಕ್ಫ್ ಕಮಿಟಿ ಜಿಲ್ಲಾ ಚೇರ್ಮನ್ ಸಿರಾಜ್ ಆಹ್ಮದ್ ದಾವಣಗೆರೆ, ಜಿಲ್ಲಾ ವಕ್ಫ್ ಸಲಹಾ ಸಮಿತಿ ಸದಸ್ಯ ಸೈಯದ್ ಮೌಜೀಂ ಪಾಷ, ಶಾಸಕ ಎಸ್. ರಾಮಪ್ಪ, ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಶಾಸಕರಾದ ಹೆಚ್. ಎಸ್. ಶಿವಶಂಕರ್, ಬಿ.ಪಿ. ಹರೀಶ್, ಎಂ.ಎಲ್.ಸಿ. ಅಬ್ದುಲ್ ಜಬ್ಬಾರ್ ಸಾಬ್, ಬಿಜೆಪಿ ನೀಲಗುಂದ ಶಿವಣ್ಣ, ವೈ.ಎನ್. ಮಹೇಶ್, ಸ್ಯಾಮ್ ಸನ್ ಮೇಸ್ತ್ರಿ, ಎಸ್ಪಿ ಸಿ.ಬಿ. ರಿಷ್ಯಂತ್ ಸಿಪಿಐ ಸತೀಶ್ ಕುಮಾರ್, ಬಿ.ಕೆ. ಸೈಯದ್ ರೆಹಮಾನ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪೌರಾಯುಕ್ತೆ ಎಸ್ ಲಕ್ಷ್ಮಿ, ರಾಘವೇಂದ್ರ ಮಠದ ವರಹಾಚಾರ್, ಪಿಎಸ್ಐ ಸುನಿಲ್ ಬಸವರಾಜ್, ವೀರಬಸಪ್ಪ ಕುಸಲಪುರ, ಡಿ.ರವಿಕುಮಾರ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ದಾವಣಗೆರೆಯ ಜೆ. ಅಮಾನುಲ್ಲಾಖಾನ್, ಇಸ್ಮಾಯಿಲ್ ಸಾಬ್, ಎ.ಎ. ಖತೀಬ್, ರುದ್ರೇಗೌಡ ವಕೀಲರು ಹಾಗು ಇತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಈ ಸಂದರ್ಭದಲ್ಲಿ ದರ್ಗಾ ಸಮಿತಿಯ ಅಡ್ವೈಸರ್ ಬಿ.ಕೆ. ಸೈಯದ್ ರೆಹಮಾನ್, ಉತ್ಸವ ಸಮಿತಿಯ ಅಧ್ಯಕ್ಷ ಹಾಜಿ ಅಲಿ, ಉಪಾಧ್ಯಕ್ಷ ನೂರುಲ್ಲಾ, ಖಜಾಂಚಿ ಶಬ್ಬೀರ್ ಖುರೇಶಿ, ಕಾರ್ಯದರ್ಶಿ ಅಲ್ಲಾಭಕ್ಷ್ ಮಕಾನ್, ಉಪಾಧ್ಯಕ್ಷ ಬಿ.ಕೆ. ಸೈಯದ್ ಬಾಷಾ, ಅಲಿ ಆಹ್ಮದ್ ಹಾಶ್ಮಿ, ಅಬ್ಬು ಸಾಲೇಹ, ಟಿ. ಮೆಹಬೂಬ್ ಬಾಷಾ, ಯುಸೂಫ್ ಇಬ್ರಾಹಿಂ, ಅಕ್ಬರ್ ಖಾನ್, ದಾದಾಪೀರ್, ಮುಜಾಮಿಲ್, ಅಲ್ತಾಫ್, ರಿಜ್ವಾನ್ ಹಾಗು ಇತರರು ಹಾಜರಿದ್ದರು.


## 13ನೇ ವರ್ಷದ ಪುಣ್ಯಸ್ಮರಣೆ



**ಶ್ರೀ ಟಿ.ಆರ್. ಶೇಖರಪ್ಪ**
(ಮರಣ : 30.03.2009)
ಜಮೀನ್ದಾರರು, ತಿಮ್ಮೇನಹಳ್ಳಿ.
ಆಡಳಿತಾಧಿಕಾರಿಗಳು, ಶ್ರೀ ವಾಲ್ಮೀಕಿ ಗುರುಪೀಠ, ರಾಜನಹಳ್ಳಿ.

ನೀವು ನಮ್ಮನ್ನಗಲಿ ಇಂದಿಗೆ ಹದಿಮೂರು ವರ್ಷಗಳಾದವು, ನೀವು ಹಾಕಿಕೊಟ್ಟ ಸನ್ಮಾರ್ಗದಲ್ಲಿ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ ....

ಶ್ರೀಮತಿ ಟಿ.ಆರ್. ನಿರ್ಮಲ ಮತ್ತು ಮಕ್ಕಳು
ಶ್ರೀಮತಿ ಟಿ.ಎಸ್. ಶೈಲ ಶ್ರೀ ಡಾ|| ಮಾರುತೇಶ್ ಎ.ಎಂ., ಚಿ|| ಎ.ಎಂ. ಚಿರಾಗ್, ಚಿ|| ಎ.ಎಂ. ಚಿನ್ಮಯಿ
ಶ್ರೀಮತಿ ಟಿ.ಎಸ್. ರಾಧ ಶ್ರೀ ಮಹೇಶ್ ಜಿ.ಎಂ., ಚಿ|| ಜಿ.ಎಂ. ಪ್ರಥಮ್, ಚಿ|| ಜಿ.ಎಂ. ಪ್ರೀತಮ್,
ಚಿ|| ಟಿ.ಎಸ್. ಅನಿಲ್‌ಕುಮಾರ್, ಶ್ರೀಮತಿ ಶ್ರೀ ಅಂಗಡಿ ಮಲ್ಲಪ್ಪ ಮತ್ತು ಮಕ್ಕಳು, ಕೈದಾಳೆ.
ಶ್ರೀಮತಿ ಶ್ರೀ ಜಿ.ಒ. ಮಹಾಂತಪ್ಪ ಮತ್ತು ಮಕ್ಕಳು, ಹಾಸನ.
ಶ್ರೀ ಕೆ.ಹೆಚ್. ಕಾಂತರಾಜು ಮತ್ತು ಸಹೋದರರು, ದಾಗಿನಕಟ್ಟೆ ಹಾಗೂ ಬಂಧು-ಮಿತ್ರರು.

# ವಾಲ್ಮೀಕಿ ಶ್ರೀಗಳ ಧರಣಿ ಸತ್ಯಾಗ್ರಹಕ್ಕೆ ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ಬೆಂಬಲ



ಹರಪನಹಳ್ಳಿ, ಮಾ. 29- ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿಯವರು ವಾಲ್ಮೀಕಿ ನಾಯಕ ಸಮುದಾಯಕ್ಕೆ 7.5 ಮೀಸಲಾತಿ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಕೈಗೊಂಡಿರುವ ಧರಣಿ ಸತ್ಯಾಗ್ರಹದಲ್ಲಿ ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ನಾಯಕರು ಭಾಗವಹಿಸಿ, ಬೆಂಬಲ ವ್ಯಕ್ತ ಪಡಿಸಿದರು.

ಈ ವೇಳೆ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸದಸ್ಯ ಶಶಿಧರ ಪೂಜಾರ ಮಾತನಾಡಿ, ರಾಜ್ಯದಲ್ಲಿ ಸರ್ಕಾರಕ್ಕೆ ಏನಾದರೂ ಕಣ್ಣು, ಕಿವಿ ಇದ್ದರೆ ದೊಡ್ಡಶಕ್ತಿಯಾಗಿ ಕುಳಿತಿರುವ ವಾಲ್ಮೀಕಿ ಸಮುದಾಯದ ಶ್ರೀ ಪ್ರಸನ್ನಾನಂದಪುರಿ ಸ್ವಾಮಿಗಳು 47 ದಿನ ಧರಣಿ ನಿರತ ಪ್ರತಿಭಟನೆಯ ಕಡೆ ಗಮನ ಹರಿಸಬೇಕು. ಮುಖ್ಯಮಂತ್ರಿಗಳು ಗಮನ ಹರಿಸದಿರುವುದು ದುರದೃಷ್ಟಕರವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಜಿ.ಪಂ. ಮಾಜಿ ಸದಸ್ಯ ಹೆಚ್.ಬಿ. ಪರಶುರಾಮಪ್ಪ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮುತ್ತಿಗಿ ಜಂಬಣ್ಣ, ಟಿ.ಎ.ಪಿ.ಸಿ.ಎಂ.ಎಸ್. ಮಾಜಿ ಅಧ್ಯಕ್ಷ ಪಿ.ಪ್ರೇಮಕುಮಾರ, ಯುವ ಮುಖಂಡ ಎಂ.ಬಿ.ಯಶವಂತಗೌಡ, ಚಿಗಟೇರಿ ಮುಖಂಡರಾದ ಜಂಬಣ್ಣ, ನೀಲಗುಂದ ಬಿ. ವಾಗೀಶ್, ಅಲಮರಸಿಕೇರಿ ಪರಶುರಾಮ, ಮಹಾಂತೇಶ್‌ನಾಯ್ಕ ಉಪಸ್ಥಿತರಿದ್ದರು.

# ಚಂದಿರ ಪ್ರಶಸ್ತಿಗೆ ಕೃತಿಗಳ ಆಹ್ವಾನ

ದಾವಣಗೆರೆ, ಮಾ.29- ಕರ್ನಾಟಕ ಬಾಲವಿಕಾಸ ಅಕಾಡೆಮಿಯು 2019, 2020 ಹಾಗೂ 2021ನೇ ಸಾಲಿನಲ್ಲಿ ಮಕ್ಕಳ ಕ್ಷೇತ್ರದಲ್ಲಿ ರಚಿಸಲ್ಪಟ್ಟ ಆಯ್ದ ಉತ್ತಮ ಪುಸ್ತಕಗಳಿಗೆ 'ಮಕ್ಕಳ ಪುಸ್ತಕ ಚಂದಿರ' ಪ್ರಶಸ್ತಿಗಾಗಿ ಕೃತಿಗಳನ್ನು ಆಹ್ವಾನಿಸಿದೆ.

ಆಯಾ ಸಾಲಿನ ಅವಧಿಯಲ್ಲಿ ಅಂದರೆ ಜನವರಿಯಿಂದ ಡಿಸೆಂಬರ್ ತಿಂಗಳ ಅಂತ್ಯದ ಅವಧಿಯಲ್ಲಿ ಪ್ರಕಟಗೊಂಡ ಸ್ವರಚಿತ ಕವನ ಸಂಕಲನ, ಕಥಾ ಸಂಕಲನ, ನಾಟಕ (ಪಠ್ಯಾಧಾರಿತ ಬಿಟ್ಟು), ಮಕ್ಕಳ ಕಾದಂಬರಿ, ವೈಜ್ಞಾನಿಕ ಲೇಖನಗಳ ಸಂಕಲನ, ಅನುವಾದಿತ ಕೃತಿ (ಯಾವುದೇ ಪ್ರಕಾರದ ಮಕ್ಕಳ ಸಾಹಿತ್ಯ), ಮಕ್ಕಳ ಸಾಹಿತ್ಯ ವಿಮರ್ಶಾ ಕೃತಿ ಹೀಗೆ ಏಳು ಪ್ರಕಾರದ ಮಕ್ಕಳ ಸಾಹಿತ್ಯದ ಕೃತಿಗಳನ್ನು ಪ್ರಶಸ್ತಿಗಾಗಿ ಆಹ್ವಾನಿಸಲಾಗಿದೆ.

ಕೃತಿಯ 4 ಪ್ರತಿಗಳನ್ನು ನಾಡಿದ್ದು ದಿನಾಂಕ 31 ರೊಳಗಾಗಿ ಯೋಜನಾಧಿಕಾರಿಗಳು, ಕರ್ನಾಟಕ ಬಾಲವಿಕಾಸ ಅಕಾಡೆಮಿ, ಚಂದ್ರಿಕಾ ಲೇಔಟ್ ಹಿಂಭಾಗ, ಕೆ.ಹೆಚ್.ಬಿ ಕಾಲೋನಿ, ಲಕಮನಹಳ್ಳಿ ಧಾರವಾಡ-580004 ಇಲ್ಲಿಗೆ ಕಳುಹಿಸಬಹುದು.

# ವಿಶೇಷ ಅಂಚೆ ಚೀಟಿ, ಪತ್ರಗಳ ಪ್ರದರ್ಶನ



ಅಂಚೆ ಪದ್ಧತಿ ಬಗ್ಗೆ ಮಕ್ಕಳಲ್ಲಿ ಜಾಗೃತಿ

ದಾವಣಗೆರೆ, ಮಾ.29- ಪ್ರಸ್ತುತ ಆಧುನಿಕ ಯುಗದಲ್ಲಿ ಯುವಪೀಳಿಗೆ ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಮುಖೇನ ವೇಗದಲ್ಲಿ ಸಂದೇಶಗಳನ್ನು ರವಾನಿಸುತ್ತಾ ತಂತ್ರಜ್ಞಾನಕ್ಕೆ ಹೆಚ್ಚಾಗಿ ಮಾರುಹೋಗಿದ್ದಾರೆ.

ಆದರೆ, ಅಂಚೆ ಪತ್ರ ಬರವಣಿಗೆ ಮೂಲಕ ಕಷ್ಟ-ಸುಖಗಳ ಅವಶ್ಯ ಸಂದೇಶಗಳನ್ನು ರವಾನಿಸುವಲ್ಲಿನ ಫೀಲಿಂಗ್ ಅನುಭವ ಮತ್ತು ಅಂಚೆ ಚೀಟಿಗಳ ಬಳಕೆ ಬಗ್ಗೆ ಅರಿವಿಲ್ಲದಂತಾಗಿದೆ.

ಅಂಚೆ ಪತ್ರ ಮತ್ತು ಅಂಚೆ ಚೀಟಿಗಳ ಬಳಕೆಯ ಗತಕಾಲದ ವಾತಾವರಣವನ್ನು ಸೃಷ್ಟಿಸಿ, ಯುವಪೀಳಿಗೆಯಲ್ಲಿ ಅದರ ಮಹತ್ವದ ಅರಿವು ಬಿತ್ತುವ ಕೆಲಸವನ್ನು ನಗರದ ಪ್ರಧಾನ ಅಂಚೆ ಕಚೇರಿಯಿಂದ ಮಾಡಲಾಯಿತು. ಆ ಮುಖೇನ ಯುವ ಪೀಳಿಗೆಯ ಗಮನ ಸೆಳೆದು ಅಂಚೆ ಪದ್ಧತಿ ಜೀವಂತಿಕೆಗೆ ಸಾಕ್ಷಿಯಾಯಿತು.

ಇತ್ತೀಚೆಗೆ ನಗರದ ಪ್ರಧಾನ ಅಂಚೆ ಕಚೇರಿಯಲ್ಲಿ ಇಲಾಖೆ ಅಧಿಕಾರಿಗಳು ಕೆಲಸದ ಒತ್ತಡದ ನಡುವೆಯೂ ಯುವ ಸಮೂಹಕ್ಕೆ ಅಂಚೆ ಪತ್ರಗಳ ಬಳಕೆಗೆ ಆಸಕ್ತಿಯುಂಟು ಮಾಡುವ ಮತ್ತು ಅಂಚೆ ಚೀಟಿಗಳನ್ನು ಪರಿಚಯಿಸುವ ಹಂಬಲ ಹೊತ್ತು 1947ರಿಂದ 2022ರವರೆಗಿನ ವಿಭಿನ್ನ ಅಂಚೆ ಚೀಟಿಗಳು ಮತ್ತು ಪತ್ರಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಅಲ್ಲದೇ ಅಂಚೆ ಚೀಟಿ ಬಳಕೆ, ಸಂಗ್ರಹ ಮತ್ತು ಅಂಚೆ ಪತ್ರಗಳ ಕುರಿತಾಗಿ ಕ್ವಿಜ್ ಪರೀಕ್ಷೆ ನಡೆಸಿ, ಅವುಗಳ ಬಗ್ಗೆ ಮತ್ತಷ್ಟು ಜ್ಞಾನವನ್ನು ಹೆಚ್ಚಿಸಲಾಯಿತು.

ಇಂತಹ ಸೂಕ್ತ ಅವಕಾಶ ನಗರದ ಬಾಡಾ ಕ್ರಾಸ್‌ನಲ್ಲಿರುವ ಜೈನ್ ಸ್ಕೂಲ್ ಮಕ್ಕಳಿಗೆ ಸಿಕ್ಕಿತ್ತು. ತಾವು ಸಂಗ್ರಹಿಸಿದ್ದ ಹಳೇ ಅಂಚೆ ಚೀಟಿಗಳು, ಅಂಚೆ ಲಕೋಟೆಗಳ ಕುರಿತು ಅಧಿಕಾರಿಗಳು ಮಕ್ಕಳಿಗೆ ಮಾಹಿತಿ ನೀಡಿ ಮನವರಿಕೆ ಮಾಡಿದರು.

ಸುಮಾರು 144 ಅಂಚೆ ಲಕೋಟೆಗಳು ಮತ್ತು 500 ಅಂಚೆ ಚೀಟಿಗಳನ್ನು ಪ್ರದರ್ಶಿಸಲಾಯಿತು. ಭಾರತದ ಹಿರಿಮೆ-ಗರಿಮೆ ಎತ್ತಿಹಿಡಿಯುವ ಪ್ರಾಣಿ, ಪಕ್ಷಿಗಳು, ದೇಶ ಬೆಳಗಿದ ಮಹಾನ್ ಚೇತನಗಳು, ಸಾಧಕರ ಚಿತ್ರವುಳ್ಳ ಅಂಚೆ ಚೀಟಿಗಳು ಆಕರ್ಷಿಸಿದವು.

ದೇಶದ ಭವಿಷ್ಯತ್ತಿನ ಮಕ್ಕಳಲ್ಲಿ ಅಂಚೆ ಚೀಟಿ ಮತ್ತು ಪತ್ರಗಳ ಬಗ್ಗೆ ಜಾಗೃತಿ ಮೂಡಿಸಿ, ಒಲವು ಮೂಡಿಸುವ ಬಗ್ಗೆ ಖುಷಿಯನ್ನು ಅಂಚೆ ಅಧಿಕಾರಿಗಳು ಅಭಿವ್ಯಕ್ತಿಪಡಿಸಿದ್ದು, ಮುಂದಿನ ದಿನಗಳಲ್ಲೂ ಸೂಕ್ತ ಅವಕಾಶ ಸಿಕ್ಕಾಗ ಮಕ್ಕಳಲ್ಲಿ ಅರಿವು ಮೂಡಿಸುವ ಹಂಬಲವನ್ನು ತೋರಿದ್ದಾರೆ. ಇನ್ನು ಪ್ರತಿ ವರ್ಷವೂ ಅಂಚೆ ಸಪ್ತಾಹದ ಮುಖೇನ ಅಂಚೆ ಚೀಟಿಗಳು, ಪತ್ರಗಳ ಪ್ರದರ್ಶಿಸಿ, ಪರಿಚಯಿಸಿ ಸಾರ್ವಜನಿಕರಲ್ಲೂ ಜಾಗೃತಿ ಮೂಡಿಸುತ್ತಾ ಬರಲಾಗುತ್ತಿದ್ದು, ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ಅಂಚೆ ಸಪ್ತಾಹದಲ್ಲಿ ಸಾವಿರ ಅಂಚೆ ಚೀಟಿಗಳು ಮತ್ತು 300 ವಿಶೇಷ ಅಂಚೆ ಲಕೋಟೆಗಳ ಪ್ರದರ್ಶಿಸಿರುವುದಾಗಿ ಪ್ರಧಾನ ಅಂಚೆ ಕಚೇರಿ ಅಧಿಕಾರಿಗಳು ತಿಳಿಸಿದ್ದಾರೆ.

ಅಂಚೆ ಪಾಲಕ ಸಿ.ವಿ. ಶಿವರಾಮ್ ಶರ್ಮ ಅಧ್ಯಕ್ಷತೆ ವಹಿಸಿದ್ದರು. ಅಂಚೆ ಸಹಾಯಕ ಅಧೀಕ್ಷಕ ಜೆ.ಎಸ್. ಗುರುಪ್ರಸಾದ್, ಅಂಚೆ ಚೀಟಿ ಸಂಗ್ರಹಕಾರ ವಿ. ಸೋಮಶೇಖರ್ ಆಚಾರ್ ಸೇರಿದಂತೆ ಇತರರು ಇದ್ದರು. ಅಂಚೆ ಚೀಟಿ ಸಂಗ್ರಹಕಾರ ಪಿ. ಗುರುಬಸವರಾಜ್ ಪ್ರದರ್ಶನದ ನಿರ್ವಹಣೆಯ ಜವಾಬ್ದಾರಿ ವಹಿಸಿಕೊಂಡಿದ್ದರು.

# ಲಂಕಾದಲ್ಲಿ ತೀವ್ರಗೊಂಡ ಔಷಧ ಸಮಸ್ಯೆ

ಕೊಲಂಬೊ, ಮಾ. 29 – ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಶ್ರೀಲಂಕಾದಲ್ಲೀಗ ಜೀವ ರಕ್ಷಕ ಔಷಧಗಳ ಕೊರತೆ ಎದುರಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.



ಶ್ರೀಲಂಕಾದ ಮಧ್ಯ ಪ್ರಾಂತ್ಯದ ಕ್ಯಾಂಡಿಯಲ್ಲಿರುವ ಟೀಚಿಂಗ್ ಹಾಸ್ಪಿಟಲ್ ಪೆರಡಾನಿಯದಲ್ಲಿ ಅನಸ್ತೇಷಿಯಾ ಔಷಧಗಳು ಹಾಗೂ ಇತರೆ ಔಷಧಿಗಳ ಕೊರತೆಯಿಂದಾಗಿ ಶಸ್ತ್ರಚಿಕಿತ್ಸೆಯನ್ನು ನಿಲ್ಲಿಸಿದೆ. ದೇಶದ ಬಹುತೇಕ ಸರ್ಕಾರಿ ಆಸ್ಪತ್ರೆಗಳು ಕಳೆದ 6 ತಿಂಗಳಿಂದ ಔಷಧ ಪೂರೈಕೆದಾರರಿಗೆ ಹಣ ಪಾವತಿ ಮಾಡಿಲ್ಲ.

ಪರಿಸ್ಥಿತಿ ಗಂಭೀರವಾಗಿದೆ, ತೀವ್ರ ಬಿಕ್ಕಟ್ಟು ಎದುರಿಸಲು ವಿಕೋಪ ನಿರ್ವಹಣಾ ವ್ಯವಸ್ಥೆ ಬೇಕಿದೆ ಎಂದು ಮೆಡಿಕಲ್ ಲ್ಯಾಬೊರೇಟರಿ ಟೆಕ್ನಾಲಜೀಸ್ ಅಸೋಸಿಯೇಷನ್ ಅಧ್ಯಕ್ಷ ರವಿ ಕುಮುದೇಶ್ ಹೇಳಿದ್ದಾರೆ.

ಈ ನಡುವೆ, ಔಷಧ ಪೂರೈಕೆದಾರರು ಎಲ್ಲಾ ಔಷಧೋಪಕರಣಗಳ ಬೆಲೆಯನ್ನು ಶೇ.30ರಷ್ಟು ಹೆಚ್ಚಿಸಲು ಲಂಕಾ ಸರ್ಕಾರ ಅನುಮತಿ ನೀಡಿದೆ. ಹಣದುಬ್ಬರ ಪ್ರಮಾಣ ತೀವ್ರ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಪೆರಡಾನಿಯ ಆಸ್ಪತ್ರೆಯ ಪರಿಸ್ಥಿತಿ ಬಗ್ಗೆ ತಿಳಿದ ವಿದೇಶಾಂಗ ಸಚಿವ ಜೈಶಂಕರ್, ಆಸ್ಪತ್ರೆಗೆ ಅಗತ್ಯ ನೆರವು ಕಲ್ಪಿಸುವ ಬಗ್ಗೆ ಚರ್ಚೆ ನಡೆಸುವಂತೆ ಲಂಕಾದಲ್ಲಿರುವ ಭಾರತದ ರಾಯಭಾರಿ ಕಚೇರಿಗೆ ತಿಳಿಸಿದ್ದಾರೆ.

# ಸ್ಮಾರ್ಟ್ ಸಿಟಿಯಾಗುತ್ತಿದ್ದರೂ ಜನರ ನಿರೀಕ್ಷೆಗಳು ಈಡೇರುತ್ತಿಲ್ಲ

**ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ಪ್ರಾಚಾರ್ಯ ಡಾ. ಬಿ.ಪಿ. ಕುಮಾರ್**

ದಾವಣಗೆರೆ, ಮಾ. 29- ದಾವಣಗೆರೆ ಸ್ಮಾರ್ಟ್ ಸಿಟಿಯಾಗಿ ಪರಿವರ್ತನೆಯಾಗುತ್ತಿದ್ದರೂ ಸಹ ಇನ್ನೂ ಜನರ ನಿರೀಕ್ಷೆಗಳನ್ನು ಈಡೇರಿಸುವುದು ಸಾಧ್ಯವಾಗು ತ್ತಿಲ್ಲ ಎಂದು ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ಪ್ರಾಚಾರ್ಯ ಡಾ. ಬಿ.ಪಿ. ಕುಮಾರ್ ಹೇಳಿದರು.

ಎಲೆಬೇತೂರು ಗ್ರಾಮದಲ್ಲಿ ಮೊನ್ನೆ ನಡೆದ 11 ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ದಾವಣಗೆರೆ ಜಿಲ್ಲೆಯ ಚಾರಿತ್ರಿಕ ಸಂಗತಿಗಳು' ಶೀರ್ಷಿಕೆಯಡಿಯ ಪ್ರಥಮ ಗೋಷ್ಠಿಯಲ್ಲಿ 'ಸ್ವಾತಂತ್ರ್ಯೋತ್ತರ ದಾವಣಗೆರೆ ಜಿಲ್ಲೆ' ವಿಷಯದ ಬಗ್ಗೆ ಅವರು ಮಾತನಾಡಿದರು.

ಹಿಂದೆ ದಾವಣಗೆರೆ ಕರ್ನಾಟಕದ ಮ್ಯಾಂಚೆಸ್ಟರ್ ಎಂಬ ಖ್ಯಾತಿ ಹೊಂದಿತ್ತು. ಇದೀಗ ಶೈಕ್ಷಣಿಕ ನಗರಿಯಾಗಿ ಪ್ರಗತಿ ಹೊಂದುತ್ತಿದೆ. ಮಹಿಳಾ ಶಿಕ್ಷಣದಲ್ಲಿ ಸಾಕಷ್ಟು ಬದಲಾವಣೆಯನ್ನು ಕಾಣುತ್ತಿದ್ದೇವೆ. ಹತ್ತಿ ಗಿರಣಿ ಸೈರನ್ ಕೇಳುತ್ತಿದ್ದ ಜನತೆ ಇದೀಗ ಶೈಕ್ಷಣಿಕ ಸಂಸ್ಥೆಗಳ ಸೈರನ್ ಕೇಳುವಂತಾಗಿದೆ. ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಸೋಲುತ್ತಿದ್ದೇವೆ ಎಂಬ ಕೊರಗು ಕಾಡುತ್ತಿದೆ ಎಂದರು.

ಆರಂಭದಲ್ಲಿ ಹತ್ತಿ ಗಿರಣಿಗಳು ದಾವಣಗೆರೆಯಲ್ಲಿ ತಲೆ ಎತ್ತಿದ್ದವು. ತದನಂತರ ಹ್ಯಾಂಡ್ ಲೂಮ್‌ಗಳು ಬಂದವು. ಕ್ರಮೇಣವಾಗಿ ಜವಳಿ ಉದ್ಯಮ ನಶಿಸುತ್ತಾ ಬಂದು, ಇದೀಗ ಗಾರ್ಮೆಂಟ್‌ಗಳು, ಕೋಳಿ ಫಾರ್ಮ್‌ಗಳು ತಲೆ ಎತ್ತಿವೆ ಎಂದು ಹೇಳಿದರು.

ಮೈಸೂರಿನ ಶಾಸನ ತಜ್ಞರೂ, ಸಹಾಯಕ ಅಧೀಕ್ಷಕರೂ ಆದ ಡಾ. ಎಸ್. ನಾಗರಾಜಪ್ಪ ಅವರು 'ಎಲೆಬೇತೂರಿನ ಚರಿತ್ರೆ' ಕುರಿತು ಹಿರಿಯೂರು ಪ್ರಾಂಶುಪಾಲರಾದ ಎಂ.ಜಿ. ರಂಗಸ್ವಾಮಿ ಅವರು ' ಫ್ರಾನ್ಸಿಸ್ ಬುಕೆನನ್ ಮತ್ತು ದಾವಣಗೆರೆ ಜಿಲ್ಲೆ' ಕುರಿತು ಮಾತನಾಡಿದರು.

ಚಿತ್ರದುರ್ಗ ಸಂಶೋಧನಾ ತಜ್ಞರಾದ ಡಾ. ಬಿ. ರಾಜಶೇಖರಪ್ಪ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮತ್ತಿತರರು ಉಪಸ್ಥಿತರಿದ್ದರು.

ಎಂ. ಷಡಾಕ್ಷರಪ್ಪ ಸ್ವಾಗತಿಸಿದರು. ದಾಗಿನಕಟ್ಟೆ ಪರಮೇಶ್ವರಪ್ಪ ನಿರೂಪಿಸಿದರು.

# ಸ್ವ ಉದ್ಯೋಗ ತರಬೇತಿಗೆ ಅರ್ಜಿ

ದಾವಣಗೆರೆ, ಮಾ.29- ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ವತಿಯಿಂದ ಹಳೇ ತೋಳಹುಣಸೆಯ ರೇಷ್ಮೆ ಇಲಾಖೆ ಆವರಣದಲ್ಲಿ ಜಿಲ್ಲೆಯ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಮಟ್ಟದ ಯುವಕ, ಯುವತಿಯರಿಗಾಗಿ ಕೌಶಲ್ಯ ತರಬೇತಿ ಹಮ್ಮಿಕೊಳ್ಳಲಾಗಿದೆ.

18 ರಿಂದ 45 ವರ್ಷ ವಯೋಮಿತಿಯ ದಾವಣಗೆರೆ ಜಿಲ್ಲೆಯ ಗ್ರಾಮೀಣ ಮಟ್ಟದ ಬಿಪಿಎಲ್ ಕಾರ್ಡ್ ಹೊಂದಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

30 ದಿನಗಳ ಎಲೆಕ್ಟ್ರಿಕ್ ಮೋಟಾರ್ ರಿವೈಂಡಿಂಗ್ ಅಂಡ್ ಸರ್ವೀಸಸ್, ಫೋಟೋಗ್ರಾಫಿ ಅಂಡ್ ವಿಡಿಯೋಗ್ರಾಫಿ ತರಬೇತಿಯನ್ನು ಪುರುಷ ಮತ್ತು ಮಹಿಳೆಯರಿಗೆ ನೀಡಲಾಗುವುದು.

ದಾಖಲೆಗಳೊಂದಿಗೆ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ, ತೋಳಹುಣಸೆ, ದಾವಣಗೆರೆ ತಾಲ್ಲೂಕು, ಜಿಲ್ಲೆ (79751-39332, 70199-80484, 99641-11314, 95383-95817, 94819-77076) ಇಲ್ಲಿ ಸಂಪರ್ಕಿಸಬಹುದು.

# ಕೊರೊನಾದಿಂದ ಭಾರತದಲ್ಲಿ ಆದ ಸಾವುಗಳು ಕಡಿಮೆ : ಕೇಂದ್ರ



ನವದೆಹಲಿ ಮಾ. 29 – ವಿಶ್ವ ಆರೋಗ್ಯ ಸಂಘಟನೆ ರೂಪಿಸಿರುವ ವರದಿಯ ಪ್ರಕಾರ, ಭಾರತದಲ್ಲಿ ಪ್ರತಿ ದಶಲಕ್ಷಕ್ಕೆ , ಕಡಿಮೆ ಕೊರೊನಾ ಸಾವುಗಳು ಸಂಭವಿಸಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಕೇಂದ್ರ ಆರೋಗ್ಯ ಖಾತೆ ಅಧೀನ ಸಚಿವೆ ಭಾರತಿ ಪ್ರವೀಣ್ ಪವಾರ್ ಅವರು ರಾಜ್ಯಸಭೆಯಲ್ಲಿ ಹೇಳಿಕೆ ನೀಡಿದ್ದು, ನಿಖರವಲ್ಲದ ಮಾನದಂಡಗಳನ್ನು ಬಳಸಿ ಹಲವರು ಭಾರತದಲ್ಲಿ ಅತಿ ಹೆಚ್ಚಿನ ಸಾವುಗಳು ಸಂಭವಿಸಿವೆ ಎಂದು ಹೇಳಿದ್ದಾರೆ. ಆದರೆ ಈ ವರದಿಗಳು ನಂಬಿಕಾರ್ಹವಲ್ಲ ಎಂದು ತಿಳಿಸಿದ್ದಾರೆ.

ಭಾರತದಲ್ಲಿ ಪ್ರತಿ ದಶಲಕ್ಷಕ್ಕೆ 374 ಕೊರೊನಾ ಸಾವುಗಳು ಸಂಭವಿಸಿವೆ. ಭಾರತ ವಿಶ್ವದಲ್ಲೇ ಅತಿ ಕಡಿಮೆ ಸಾವುಗಳನ್ನು ಕಂಡ ದೇಶಗಳಲ್ಲಿ ಒಂದಾಗಿದೆ ಎಂದವರು ಹೇಳಿದ್ದಾರೆ.

# ಸೇವಾಭದ್ರತೆ ಒದಗಿಸಲು ಆರೋಗ್ಯ ಸಿಬ್ಬಂದಿಗಳ ಒತ್ತಾಯ



ದಾವಣಗೆರೆ,ಮಾ.29- ಕೋವಿಡ್ ಸಂದರ್ಭದಲ್ಲಿ ರಾಜ್ಯ ಸರ್ಕಾರ ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಂಡಿದ್ದ ಎಲ್ಲಾ ಆರೋಗ್ಯ ಇಲಾಖೆಯ ಕೊರೊನಾ ವಾರಿಯರ್ಸ್‌ಗಳನ್ನು ನಾಡಿದ್ದು ದಿನಾಂಕ 31ರ ನಂತರವೂ ಕೆಲಸದಲ್ಲಿ ಮುಂದುವರೆಸಬೇಕೆಂದು ಕರ್ನಾಟಕ ಕೊರೊನಾ ಆರೋಗ್ಯ ಸಿಬ್ಬಂದಿಗಳ ಕ್ಷೇಮಾಭಿವೃದ್ಧಿ ಸಂಘ ಒತ್ತಾಯಿಸಿದೆ.

ರಾಜ್ಯ ಸರ್ಕಾರದಿಂದ ಕೋವಿಡ್ ಸಂಕಷ್ಟದ ಸಮಯದಲ್ಲಿ ರೋಗಿಗಳಿಗೆ ಯಾವುದೇ ತೊಂದರೆ ಆಗಬಾರದೆನ್ನುವ ಉದ್ದೇಶದಿಂದ ಜಿಲ್ಲೆಯಲ್ಲಿ 180 ಸೇರಿದಂತೆ ರಾಜ್ಯಾದ್ಯಂತ ಒಟ್ಟು 5,800 ಸಿಬ್ಬಂದಿಗಳನ್ನು ಆರು ತಿಂಗಳ ಅವಧಿಗೆ ಸರ್ಕಾರ ನೇಮಕಾತಿ ಮಾಡಿಕೊಂಡಿತ್ತು. ನಂತರದಲ್ಲಿ ಅವಧಿ ವಿಸ್ತರಣೆ ಮಾಡಿ ನಮ್ಮಿಂದ ಸೇವೆ ಪಡೆಯಲಾಯಿತು. ಆದರೆ, ಈಗ ಇದ್ದಕ್ಕಿದ್ದಂತೆ ಇದೇ ಮಾ.31ರ ನಂತರ ನಮ್ಮನ್ನು ಕೆಲಸದಿಂದ ತೆಗೆದುಹಾಕಲಾಗುತ್ತಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಪ್ರಮೋದ್ ಬೇಸರ ವ್ಯಕ್ತಪಡಿಸಿದ್ದಾರೆ.

ಆರೋಗ್ಯ ಇಲಾಖೆಯಲ್ಲಿ ಹಲವು ಹುದ್ದೆಗಳನ್ನು ಖಾಲಿ ಬಿಡಲಾಗಿದೆ. ಇದರಿಂದ ರಾಜ್ಯದಲ್ಲಿ ಮತ್ತೆ 4ನೇ ಅಲೆ ಬರುವ ಸಂಭವವಿದ್ದು, ನಂತರದಲ್ಲಿ ರೋಗಿಗಳಿಗೆ ತೊಂದರೆ ಆಗುವ ಸಂಭವವೂ ಇರುವುದರಿಂದ ನಮ್ಮನ್ನೇ ಮುಂದುವರೆಸಿ, ನಮಗೆ ಸೇವಾ ಭದ್ರತೆ ಸರ್ಕಾರ ನೀಡಬೇಕು. ಇಲ್ಲವಾದರೆ, ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

# ಕುಂದೂರಿನಲ್ಲಿ ಇಂದು ಕುಸ್ತಿ

ಹೊನ್ನಾಳಿ ತಾಲ್ಲೂಕಿನ ಕುಂದೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಬ್ರಹ್ಮ ರಥೋತ್ಸವದ ಅಂಗವಾಗಿ ಇಂದು ಬಯಲು ಜಂಗೀ ಕುಸ್ತಿ ಪಂದ್ಯಗಳು ಜರುಗಲಿವೆ.

# ಹಿಜಾಬ್ ಹೆಸರಲ್ಲಿ ರಾಜ್ಯದಲ್ಲಿನ ಬೆಳವಣಿಗೆ ನಿಲ್ಲಿಸಲು ಆಗ್ರಹ



**ಮಹಿಳೆಯ ಏಕಾಂಗಿ ಹೋರಾಟ**

ದಾವಣಗೆರೆ, ಮಾ.29- ಹಿಜಾಬ್ ಹೆಸರಲ್ಲಿ ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ನಿಲ್ಲಿಸುವಂತೆ ಒತ್ತಾಯಿಸಿ, ಬುರ್ಖಾಧಾರಿ ಮುಸ್ಲಿಂ ಮಹಿಳೆಯೊಬ್ಬರು ತನ್ನ ಕೂಸಿನ ಸಮೇತ ನಗರದ ಅರಳಿ ಮರ ವೃತ್ತದ ಬಳಿ ಏಕಾಂಗಿಯಾಗಿ ನಡೆಸುತ್ತಿರುವ ಧರಣಿಯನ್ನು ಮುಂದುವರೆಸಿದ್ದಾರೆ.

ಜಾಸ್ಮಿನ್ ಬಾನು ಎಂಬ ಮಹಿಳೆ ತಮ್ಮ ವರ್ಷದ ಕೂಸಿನ ಸಮೇತ ಉರಿಯುವ ಬಿಸಿಲ ಝಳದ ಮಧ್ಯೆಯೂ ಏಕಾಂಗಿಯಾಗಿ ವಿನೂತನ ಮೌನ ಹೋರಾಟವನ್ನು ಆರಂಭಿಸುವ ಮೂಲಕ ಗಮನ ಸೆಳೆದಿದ್ದಾರೆ.

'ನನ್ನುಡುಗೆ ನನ್ನ ಇಷ್ಟ'. ಅದನ್ನು ತಡೆಯಲು ಯಾರಿಗೂ ಅಧಿಕಾರವಿಲ್ಲವೆಂಬ ಕರಪತ್ರ ಸಮೇತ ಹೋರಾಟ ಆರಂಭಿಸಿರುವ ಮಹಿಳೆ, ಸಿಎಂ ಬಸವರಾಜ ಬೊಮ್ಮಾಯಿ ಕೇವಲ ಒಂದು ಕೋಮು, ಧರ್ಮ, ಪಂಗಡಕ್ಕೆ ಮಾತ್ರ ಸೀಮಿತರಲ್ಲ. ಹಿಜಾಬ್ ಹೆಸರಿನಲ್ಲಿ ನಡೆಯುತ್ತಿರುವ ಇತರೆ ಬೆಳವಣಿ ಗೆಗಳು ಮೊದಲು ನಿಲ್ಲಬೇಕು ಎಂದರು.

ಪ್ರತಿಯೊಂದು ಧರ್ಮೀಯರೂ ಬಾಳುವಂತಹ ವಾತಾವರಣ ನಿರ್ಮಾಣವಾಗಬೇಕು. ಹಿಜಾಬ್ ವಿಚಾರಕ್ಕೆ ಸಂಬಂಧಿಸಿದಂತೆ ಮುಸ್ಲಿಂ ವ್ಯಾಪಾರಿಗಳಿಗೆ ಬಹಿಷ್ಕಾರದಂತಹ ಚಟುವಟಿಕೆಗಳು, ವ್ಯಾಪಾರ ಮಾಡಲು ಅವಕಾಶ ನೀಡದಂತಹ ಘಟನೆಗಳನ್ನು ಮುಖ್ಯಮಂತ್ರಿಗಳು ಮೊದಲು ತಡೆಯಬೇಕು. ಹಿಜಾಬ್ ವಿಚಾರಕ್ಕೆ ಸಂಬಂಧಿಸಿದಂತೆ ಬಹಿಷ್ಕಾರದಂತಹ ಚಟುವಟಿಕೆಗಳು ನಡೆಯುತ್ತಿವೆ ಎಂದು ದೂರಿದರು. ವ್ಯಾಪಾರ ಬಹಿಷ್ಕಾರದ ಹೆಸರಿನಲ್ಲಿ ಬಡವರ ಶೋಷಣೆಯಾಗುತ್ತಿದೆ. ನಾವು ಸಂವಿಧಾನಬದ್ಧ ಪ್ರತಿಭಟನೆ ಮಾಡುತ್ತಿದ್ದೇವೆ. ನನ್ನ ದೇಶದಲ್ಲಿ ಶಾಂತಿ ವಾತಾವರಣ ಕದಡುವ ಪ್ರಯತ್ನದ ವಿರುದ್ಧ ನನ್ನ ಹೋರಾಟ, ಪ್ರತಿಭಟನೆ ಇದಾಗಿದೆ. ಇದು ಎಲ್ಲಿವರೆಗೆ ನಡೆಯುತ್ತದೋ ನಮಗೆ ಗೊತ್ತಿಲ್ಲ. ರಾಜ್ಯದಲ್ಲಿ ಶಾಂತಿ ನೆಲೆಸುವವರೆಗೂ ನನ್ನ ಪ್ರತಿಭಟನೆ ಎಂದು ಹೋರಾಟ ನಿರತ ಮಹಿಳೆ ಎಚ್ಚರಿಸಿದರು.

# ವ್ಯಕ್ತಿಗೆ ಎಚ್ಚರ ತಪ್ಪುವಂತೆ ಹಲ್ಲೆ : ದರೋಡೆ

ದಾವಣಗೆರೆ, ಮಾ.29- ಜಮೀನಿನ ಕೆಲಸ ಮುಗಿಸಿಕೊಂಡು ಮನೆಗೆ ವಾಪಾಸ್ ತೆರಳುತ್ತಿದ್ದ ವ್ಯಕ್ತಿ ಮೇಲೆ ಮೂವರು ದರೋಡೆಕೋರರು ಎಚ್ಚರ ತಪ್ಪುವಂತೆ ಹಲ್ಲೆ ಮಾಡಿ, ದರೋಡೆ ಮಾಡಿರುವ ಘಟನೆ ನಗರದ ಹೊರ ವಲಯದ ರಾಷ್ಟ್ರೀಯ ಹೆದ್ದಾರಿ-48ರ ಸರ್ವೀಸ್ ರಸ್ತೆಯ ಬಸವನಗೌಡ ಬಡಾವಣೆ ಸೇತುವೆ ಬಳಿ ನಡೆದಿದೆ. ಆವರಗೆರೆ ಬಸವನಗೌಡ ಬಡಾವಣೆಯ ಖಾಸಿಂ ಅಲಿ ಹಲ್ಲೆಗೆ ಒಳಗಾಗಿ, ಹಣ ಕಳೆದುಕೊಂಡಿದ್ದಾರೆ.

ಈ ಸಂಬಂಧ ವಿದ್ಯಾನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ದರೋಡೆಕೋರರಿಗಾಗಿ ಜಾಲ ಬೀಸಿದ್ದಾರೆ. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಭೇಟಿ ನೀಡಿ, ಪರಿಶೀಲಿಸಿದ್ದಾರೆ.

# ದಸಂಸ ಪದಾಧಿಕಾರಿಗಳ ಆಯ್ಕೆ



ದಾವಣಗೆರೆ, ಮಾ.29- ನಗರದಲ್ಲಿ ಕಳೆದ ವಾರ ನಡೆದ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ)ಯ ರಾಜ್ಯ ಮಟ್ಟದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಸಮಾ ವೇಶದಲ್ಲಿ ಸಮಿತಿಯ ನೂತನ ಪದಾಧಿಕಾರಿಗಳನ್ನು ರಚಿಸಲಾಗಿದೆ.

ಎಂ.ಗುರುಮೂರ್ತಿ (ಶಿವಮೊಗ್ಗ) ರಾಜ್ಯ ಸಂಚಾಲಕರಾಗಿ ಮರು ಆಯ್ಕೆಯಾಗಿದ್ದಾರೆ. ರಾಜ್ಯ ಸಂಘಟನಾ ಸಂಚಾಲಕರಾಗಿ ಬಿ.ಎನ್.ಗಂಗಾಧರಪ್ಪ, ಚಿಕ್ಕಬಳ್ಳಾಪುರ, ಹನುಮಂತಪ್ಪ ಕಾಕರಗಲ್, ರಾಯಚೂರು, ಪಕ್ಕೀರಪ್ಪ ಮುಂಡಗೋಡ, ಕಾರವಾರ, ಮುಂಡರಗಿ ನಾಗರಾಜ್ ಬಳ್ಳಾರಿ, ಆರ್. ವೆಂಕಟೇಶ್ ಮಂಡ್ಯ.

ರಾಜ್ಯ ಖಜಾಂಚಿಯಾಗಿ ಶಿವಮೊಗ್ಗದ ಬಿ.ಎ.ಕಾಟ್ಕೆ, ಮಹಿಳಾ ವಿಭಾಗದ ರಾಜ್ಯ ಸಂಚಾಲಕರಾಗಿ ಚಿಕ್ಕಬಳ್ಳಾಪುರದ ಡಾ.ರತ್ನಮ್ಮ (ಜೀವಿಕ), ಮಹಿಳಾ ಘಟಕದ ರಾಜ್ಯ ಸಂಘಟನಾ ಸಂಚಾಲಕರಾಗಿ ಹಾವೇರಿಯ ಕೆ.ಸಿ.ಅಕ್ಷತಾ, ಮೈಸೂರಿನ ನ್ಯಾಯವಾದಿ ಭಾಗ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಮಿತಿಯ ರಾಜ್ಯ ಸಂಚಾಲಕರಾದ ಎಂ.ಗುರುಮೂರ್ತಿ, ಪ್ರೊ.ಬಿ.ಎಲ್. ರಾಜು, ಶಿವಬಸಪ್ಪ ಭದ್ರಾವತಿ, ಎಂ.ಕರಿಯಪ್ಪ ಹತ್ತಿಗುಂದ, ಚಿತ್ರದುರ್ಗ ಜಿಲ್ಲಾ ಸಂಚಾಲಕ ಕೆಂಗುಂಟೆ ಜಯಣ್ಣ, ಪ್ರಸನ್ನ ಎಂ.ಜಯಣ್ಣ, ರವಿ ಅರಕೆರೆ ಶಿವಮೊಗ್ಗ, ಹನುಮಂತ ಹೆಡ್ಡಾಳ್ ಶಿವಮೊಗ್ಗ, ಅಶೋಕ್ ಜೀನಳ್ಳಿ, ಹರಿಹರ ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್, ಅಣಜಿ ಹನುಮಂತ ಹಾಗೂ ಇತರರಿದ್ದರು.

# ಮನುಷ್ಯ ಎಷ್ಟೇ ಕೆಟ್ಟವನಾಗಿದ್ದರೂ ಸಜ್ಜನರ ಸಂಘ ಮಾಡಿದರೆ ಶುದ್ಧನಾಗುತ್ತಾನೆ



**ಯಲವಟ್ಟಿಯ ಶ್ರೀ ಗುರು ಸಿದ್ಧಾಶ್ರಮದ ಕಾರ್ಯಕ್ರಮದಲ್ಲಿ ಚಿತ್ರದುರ್ಗದ ಶ್ರೀ ಸದ್ಗುರು ಕಬೀರಾನಂದ ಆಶ್ರಮದ ಶ್ರೀ ಶಿವಲಿಂಗಾನಂದ ಸ್ವಾಮೀಜಿ ಪ್ರತಿಪಾದನೆ**

ಮಲೇಬೆನ್ನೂರು,ಮಾ.29- ಜೀವನ ಎಂದರೆ ಹರಿಯುವ ನೀರಿನಂತೆ, ಶುದ್ಧ ನೀರಿನಲ್ಲಿ ಹೊಲಸು ನೀರು ಸೇರಿದರೆ ಅದು ಶುದ್ಧವಾಗುತ್ತದೆ. ಮನುಷ್ಯ ಎಷ್ಟೇ ಕೆಟ್ಟವನಾಗಿದ್ದರೂ ಸಜ್ಜನರ ಸಂಘ ಸಿಕ್ಕರೆ ಶುದ್ಧನಾಗುತ್ತಾನೆಂದು ಚಿತ್ರದುರ್ಗದ ಶ್ರೀ ಸದ್ಗುರು ಕಬೀರಾನಂದ ಆಶ್ರಮದ ಶ್ರೀ ಶಿವಲಿಂಗಾನಂದ ಸ್ವಾಮೀಜಿ ಪ್ರತಿಪಾದಿಸಿದರು.

ಯಲವಟ್ಟಿಯ ಶ್ರೀ ಗುರು ಸಿದ್ಧಾಶ್ರಮದಲ್ಲಿ ಹಮ್ಮಿಕೊಂಡಿದ್ದ ಬ್ರಹ್ಮಲೀನ ಸದ್ಗುರುಗಳಾದ ಶ್ರೀ ಶಿವಾನಂದ ಸ್ವಾಮೀಜಿ ಮತ್ತು ಶ್ರೀ ನಿತ್ಯಾನಂದ ಸ್ವಾಮೀಜಿ ಅವರ ಪುಣ್ಯ ಸ್ಮರಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಒಳ್ಳೆಯ ಆಲೋಚನೆ, ಚಿಂತನೆ ಇಲ್ಲದೆ ಮನುಷ್ಯನ ಮನಸ್ಸು ಕೆಟ್ಟು ಹೋಗಿದ್ದು, ಮನುಷ್ಯ ಸ್ವಾರ್ಥಕ್ಕಾಗಿ ಏಕಾಂಗಿಯಾಗಿ ಇರದೆ ಸಜ್ಜನರ ಸಂಘದಲ್ಲಿ ಬೆರೆತು ಮನಸ್ಸನ್ನು ಶುದ್ಧ ಮಾಡಿಕೊಳ್ಳಬೇಕೆಂದ ಸ್ವಾಮೀಜಿ ಅವರು, ವಾಲ್ಮೀಕಿ ನಾರಾಯಣನ ಸಹವಾಸದಿಂದ ಆದಿಕವಿ ಆದರು. ಸಜ್ಜನರ ಸಂಘವು ಹೆಜ್ಜೇನು ಸವಿದಂತೆ ಎಂಬ ಮಾತು ಎಲ್ಲಾ ಕಾಲಕ್ಕೂ ಸತ್ಯ ಎಂದರು.

ದಾವಣಗೆರೆಯ ಜಡೇಸಿದ್ಧ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ನಡತೆ ಚೆನ್ನಾಗಿದ್ದರೆ ಶ್ರೇಷ್ಠ ವ್ಯಕ್ತಿಯಾಗಲು ಸಾಧ್ಯ. ಚಾರಿತ್ರ್ಯ ಎಂದೂ ಕೆಡದಂತೆ ನೋಡಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಹಣ, ಆಸ್ತಿ ಸಂಪಾದನೆ ಮಾಡುವುದು ಸುಲಭ, ಆದರೆ ಸಾಧು-ಸಂತರ ಸಹವಾಸ ಮಾಡುವುದು ಬಹಳ ಕಷ್ಟ ಎಂದ ಸ್ವಾಮೀಜಿ, ಸತ್ಸಂಗ ಜೀವನವನ್ನು ಆನಂದದ ಕಡೆಗೆ ಕರೆದುಕೊಂಡು ಹೋಗುತ್ತದೆ ಎಂದರು.

ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್ ಮಾತನಾಡಿ, ಶ್ರೀ ಸಿದ್ಧಾರೂಢರ ಚಿಂತನೆ ಹೊಂದಿರುವವರು ಲೋಕ ಕಲ್ಯಾಣ ಕೆಲಸ ಮಾಡುತ್ತಿದ್ದಾರೆ, ಕೆಲವು ಸ್ವಾಮೀಜಿಗಳು ನಾವೇ ಸರ್ವ ಶ್ರೇಷ್ಠ, ಸುಪ್ರೀಂ ಎನ್ನುವ ಹಾಗೆ ನಡೆದುಕೊಳ್ಳುತ್ತಿದ್ದಾರೆ. ಅಂತಹ ಸ್ವಾಮೀಜಿಗಳಿಂದ ಸಮಾಜಕ್ಕೆ ಒಳಿತಾಗಲು ಸಾಧ್ಯವಿಲ್ಲ, ಎಲ್ಲಾ ಜಾತಿ, ಧರ್ಮಗಳ ಹಿತ ಬಯಸುವವರೇ ನಿಜವಾದ ಸಂತರು ಎಂದು ಪ್ರತಿಪಾದಿಸಿದರು.

ಇತ್ತೀಚೆಗೆ ರಾಜಕೀಯ ಲಾಭಕ್ಕಾಗಿ ಧರ್ಮಗಳನ್ನು ಬಳಸಿಕೊಳ್ಳುತ್ತಿರುವುದು ತುಂಬಾ ಬೇಸರದ ಸಂಗತಿಯಾಗಿದ್ದು, ಇಂತಹ ಬೆಳವಣಿಗೆಯಿಂದ ದೇಶದ ಪರಿಸ್ಥಿತಿ ತುಂಬಾ ಹದಗೆಟ್ಟಿದೆ ಎಂದು ಶಿವಶಂಕರ್ ಹೇಳಿದರು.

ಹದಡಿ ಚಂದ್ರಗಿರಿ ಮಠದ ಶ್ರೀ ಮುರುಳೀಧರ ಸ್ವಾಮೀಜಿ, ಹೋತನಹಳ್ಳಿಯ ಸಿದ್ಧಾರೂಢ ಮಠದ ಶ್ರೀ ಶಂಕರಾನಂದ ಸ್ವಾಮೀಜಿ, ದಾಗಿನಕಟ್ಟೆಯ ಸಿದ್ಧಾರೂಢ ಮಠದ ಶ್ರೀ ಕೃಷ್ಣಾನಂದ ಭಾರತಿ ಸ್ವಾಮೀಜಿ, ಮಣಕೂರಿನ ಸಿದ್ಧಾರೂಢ ಗುರು ಸೇವಾಶ್ರಮದ ಶ್ರೀ ಚನ್ನಬಸಮ್ಮ ತಾಯಿ ಅವರು ಆಶೀರ್ವಚನ ನೀಡಿದರು.

ಈ ವೇಳೆ ನಂದಿಗುಡಿ ಗ್ರಾಮದ ಯೋಧ ಡಿ.ಜಿ ಶಂಭಯ್ಯ ಅವರನ್ನು ಪತ್ನಿ ಸುಮ ಸಮೇತ ಸನ್ಮಾನಿಸಿ, ಗೌರವಿಸಲಾಯಿತು.

ಶ್ರೀ ಗುರು ಸಿದ್ಧಾರೂಢಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ ದಿವ್ಯ ನೇತೃತ್ವ ವಹಿಸಿದ್ದರು. ಸಿರಿಗೆರೆಯ ಸಿದ್ದೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪಿಎಸಿಎಸ್ ಸಿಇಓ ಶೇಖರಪ್ಪ ಸ್ವಾಗತಿಸಿದರು. ಗ್ರಾಮದ ಹಿರಿಯರಾದ ಮುರುಗೆಪ್ಪಗೌಡ್ರು, ಜಿ.ಬಸಪ್ಪ ಮೇಷ್ಟ್ರು, ಜಿ.ಆಂಜನೇಯ, ಜಿಗಳಿಯ ಜಿ.ಆನಂದಪ್ಪ, ನಿಟ್ಟೂರಿನ ಕೆ. ಸಂಜೀವಮೂರ್ತಿ, ಎನ್. ಜಿ.ಬಸವನಗೌಡ, ಹೊಳೆ ಸಿರಿಗೆರೆಯ ಮಾಗೋಡ್ ಈಶ್ವರಪ್ಪ, ಮಾಗೋಡ್ ಸಿದ್ಧಪ್ಪ, ಕುಂಬಳೂರು ಕುಬೇರಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.


ಯುಗಾದಿ ವಿಶೇಷ ಚಿಕಿತ್ಸೆ (ರಿಯಾಯಿತಿ ದರದಲ್ಲಿ)

ವಸಂತ ಋತುವಿನ ಯುಗಾದಿ ಹಬ್ಬಕ್ಕೆ ದೇಹದ ಅಭ್ಯಂಗ (ಮಸಾಜ್), ಬಹು ಮುಖ್ಯ ಭಾಗ, ದೇಹದ ಮೂಳೆಗಳಿಗೆ, ಚರ್ಮದ ಕಾಂತಿಗೆ ಎಣ್ಣೆ ಅತ್ಯವಶ್ಯಕ. ಅದರಂತೆ 14.03.2022 ರಿಂದ 14.04.2022ರವರೆಗೆ ವಿಶೇಷ ರಿಯಾಯಿತಿಯಲ್ಲಿ ಅಭ್ಯಂಗ (ಮಸಾಜ್) ಕೇವಲ 1800 (4 ಜನರಿಗೆ) ನಿಮ್ಮ ಕುಟುಂಬಸ್ಥರು ಅಥವಾ ಆಯ್ದು 4 ಜನ ಸ್ನೇಹಿತರು ಸೇರಿ ಚಿಕಿತ್ಸೆ ಮಾಡಿಸಿಕೊಳ್ಳಬಹುದು. ಆಸಕ್ತರು ಇಂದೇ ಸಂಪರ್ಕಿಸಿರಿ.

ANVAYA

ಅನ್ವಯ ಆಯುರ್ವೇದ ಆಸ್ಪತ್ರೆ

#1981, 10ನೇ ಕ್ರಾಸ್, ಎಂ.ಸಿ.ಸಿ.'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ

ಫೋ: 08192 252228 ಮೊ: 86186 42929

ಸರ್ವರಿಗೂ ಯುಗಾದಿ ಹಬ್ಬದ ಶುಭಾಶಯಗಳು

ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.) ಮತ್ತು ಹಿಂದೂ ವಧು–ವರರ ಮಾಹಿತಿ ಕೇಂದ್ರ

SGM Tours

ಎಸ್.ಜಿ.ಎಂ. ಟೂರ್ಸ್

ಬಾಣಾಪುರ ಆಸ್ಪತ್ರೆ ಎದುರು, 8 ನೇ ಮೇನ್, ಪಿ.ಜೆ ಬಡಾವಣೆ, ದಾವಣಗೆರೆ.

94481 59303, 78925 10652

ವಿಮಾನ ಮತ್ತು ಬಸ್ಸಿನಲ್ಲಿ 14 ದಿನಗಳ ಚಾರ್‌ಧಾಮ್ ವಿಶೇಷ ಯಾತ್ರೆ

ಜೂನ್‌ನಲ್ಲಿ ಯಾತ್ರೆ

(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ.)*

ಕೆಲವೇ ಸೀಟುಗಳಿವೆ

ಸಂದರ್ಶಿಸುವ ಸ್ಥಳಗಳು : ನವದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ

## ಲೇಡಿಸ್ ಕ್ಲಬ್‌ನಿಂದ ಮಹಿಳಾ ದಿನಾಚರಣೆ




ದಾವಣಗೆರೆ, ಮಾ.29- ದಾವಣಗೆರೆ ಲೇಡಿಸ್ ಕ್ಲಬ್, ರೋಟರಿ ಕ್ಲಬ್ ದಾವಣಗೆರೆ ದಕ್ಷಿಣ ಇವರ ಜಂಟಿ ಆಶ್ರಯದಲ್ಲಿ ನಗರದ ರೋಟರಿ ಬಾಲಭವನದಲ್ಲಿ ಈಚೆಗೆ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಈ ಕಾರ್ಯಕ್ರಮದ ಅಂಗವಾಗಿ ಎಲ್ಲಾ ವಯಸ್ಸಿನ ಮಹಿಳೆಯರಿಗೆ ಹಳೆಯ ಆಟಗಳನ್ನು ನಡೆಸಲಾಯಿತು.

ಪೊಲೀಸ್ ಇಲಾಖೆಯ ಶಿಲ್ಪ, ಲತಾ, ಆರೋಗ್ಯ ಇಲಾಖೆಯ ಸುಜಾತ, ಯಾಸ್ಮಿನ್, ಸಾರಿಗೆ ಇಲಾಖೆಯ ಗೀತಾ, ಶಿಕ್ಷಣ ಇಲಾಖೆಯ ಬಾಲಮಣಿ ಅವರುಗಳನ್ನು ಸಮಾರಂಭದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು.

83 ವರ್ಷದ ಶ್ರೀಮತಿ ಬಾಲಮಣಿ ಅವರು ಎಲ್ಲಾ ಆಟಗಳಲ್ಲಿ ಭಾಗವಹಿಸಿದ್ದು ವಿಶೇಷವಾಗಿದ್ದು, ದಾವಣಗೆರೆ ಲೇಡಿಸ್ ಕ್ಲಬ್‌ನ ಈ ವಿಶೇಷತೆ ಬಗ್ಗೆ ಬಾಲಮಣಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕ್ಲಬ್ ಸಂಸ್ಥಾಪಕರೂ, ವಕೀಲರೂ ಆದ ಶ್ರೀಮತಿ ಅಮೀರಾಬಾನು, ರೋಟರಿ ಕ್ಲಬ್ ಅಧ್ಯಕ್ಷರಾದ ಡಾ. ಸುಜೀತ್, ಲೇಡಿಸ್ ಕ್ಲಬ್‌ನ ಅಧ್ಯಕ್ಷರಾದ ವಿನೋದ, ಉಪಾಧ್ಯಕ್ಷರಾದ ನಾಗರತ್ನ, ಪ್ರಧಾನ ಕಾರ್ಯದರ್ಶಿ ಚೇತನ್, ಸಂಧ್ಯಾರಾಣಿ, ಸದಸ್ಯೆಯರಾದ ಶಾರದ ಶೇಟ್, ರೇಣುಕಮ್ಮ, ವೀಣಾ, ಮಮತ, ಶಶಿ ಶಿವಯ್ಯ, ಕುಸುಮ ಉಪಸ್ಥಿತರಿದ್ದರು.

**ವಿವಿಧ ಆಟಗಳ ವಿಜೇತರು :** ಕೆರೆ-ದಡ : ಪುಷ್ಪಾ ಹಿಂಚಾರಪ್ಪ (ಪ್ರಥಮ), ಲೀಲಾ ಸುಭಾಷ್ (ದ್ವಿತೀಯ)

ಲಕ್ಕಿ ಆಟ : ಸುಜಾತ ಬಿ.ಕೆ. (ಪ್ರಥಮ), ಅನ್ನಪೂರ್ಣ (ದ್ವಿತೀಯ), ಸಂಗೀತ ಎ.ಪಿ. (ತೃತೀಯ).

ಪಾಸಿಂಗ್ ದ ಡಾಲ್ : ಗಾಯತ್ರಿ (ಪ್ರಥಮ), ಗಂಗಾ (ದ್ವಿತೀಯ).

ಹೂ ಕಟ್ಟುವುದು : ಕರುಣಾ (ಪ್ರಥಮ), ನಾಗವೇಣಿ (ದ್ವಿತೀಯ).

ಚಲನಚಿತ್ರಗಳ ಹೆಸರು : ಕೊಟ್ರೇಶ್ (ಪ್ರಥಮ), ನೌಶಿನ್ ತಾಜ್ (ದ್ವಿತೀಯ)

ಸೀರೆ ಉಡುವುದರಲ್ಲಿ : ಕಾಜಲ್ (ಪ್ರಥಮ), ವೀರಮ್ಮ (ದ್ವಿತೀಯ)

ಕುಂಟಪಿಲ್ಲೆ : ಪಲ್ಲವಿ (ಪ್ರಥಮ), ಲಕ್ಷ್ಮಿ (ದ್ವಿತೀಯ)

ಸ್ಕಿಪಿಂಗ್ : ಪೂರ್ಣಿಮ (ಪ್ರಥಮ), ಸುಮ ವಿಜಯ (ದ್ವಿತೀಯ).

ಬೀಸಕಲ್ಲು : ಗಿರಿಜಾ ಮಂಜಪ್ಪ (ಪ್ರಥಮ), ಮಂಗಳಮ್ಮ.

ಕವಡೆ : ಶಿವಬಸಮ್ಮ (ಪ್ರಥಮ), ಕುಸುಮ (ದ್ವಿತೀಯ) ಸ್ಥಾನ ಪಡೆದಿರುತ್ತಾರೆ.

## ತ್ರಿಮತಸ್ತ ಬ್ರಾಹ್ಮಣ ವಟುಗಳಿಗೆ ಧರ್ಮೋಪನಯನ

ದಾವಣಗೆರೆ, ಮಾ.29- ಶ್ರೀ ಶಂಕರ ಸೇವಾ ಸಂಘದ ಆಶ್ರಯದಲ್ಲಿ ಮೇ 6 ರಂದು ಶ್ರೀ ಶಂಕರ ಭಗವತ್ಪಾದರ ಜಯಂತಿ ಅಂಗವಾಗಿ ತ್ರಿಮತಸ್ತ ಬ್ರಾಹ್ಮಣ ವಟುಗಳಿಗೆ ಧರ್ಮೋಪನಯನವನ್ನು ನಗರದ ಶ್ರೀ ಶಂಕರ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ. ಆಸಕ್ತಿಯುಳ್ಳ ಪೋಷಕರು ಏಪ್ರಿಲ್ 20 ರೊಳಗಾಗಿ ದೇವಸ್ಥಾನದ ವ್ಯವಸ್ಥಾಪಕ (08192-221680, 8296408068, 9480710858) ರನ್ನು ಸಂಪರ್ಕಿಸಿ ಹೆಸರು ನೋಂದಾಯಿಸುವಂತೆ ಸಂಘದ ಕಾರ್ಯದರ್ಶಿ ಶ್ರೀನಿವಾಸ ಕೆ. ಜೋಷಿ ತಿಳಿಸಿದ್ದಾರೆ.

# ದೇಹದಾನ - ಅಂಗಾಂಗ ದಾನದ ಬಗ್ಗೆ ಅರಿವು

ಕಳೆದ 2 ವರ್ಷಗಳಿಂದ ಸ್ಥಗಿತಗೊಂಡಿದ್ದ ದೇಹ ದಾನಕ್ಕೆ ಕಾರಣ ನಮ್ಮ ದೇಶದಲ್ಲಿ ಅಲ್ಲದೇ ವಿದೇಶಗಳಲ್ಲೂ ಸದ್ದು ಮಾಡಿದ ಮಹಾಮಾರಿ 'ಕೊರೊನಾ'. ಈ ಹೆಮ್ಮಾರಿ ಕಾಯಿಲೆಯಿಂದ ಅನೇಕ ಬಂಧುಗಳು, ಮಿತ್ರರು, ಹಿರಿಯರು, ಕಿರಿಯರು, ಮಹಿಳೆಯರು, ಮಕ್ಕಳು ಎನ್ನದೆ ಎಲ್ಲರೂ ಪ್ರಾಣ ತ್ಯಾಗ ಮಾಡಿದರು. ಇದೇ ಕಾರಣದಿಂದ ನಮ್ಮ ಊರಿನಲ್ಲಲ್ಲದೇ ಇತರೆ ಊರುಗಳೂ ಸಹ ಮೆಡಿಕಲ್ ಹಾಸ್ಪಿಟಲ್ ಅನಾಟಮಿ ವಿಭಾಗದಲ್ಲಿ ದೇಹದಾನದ ಪ್ರಕ್ರಿಯೆ ಹಿಂದೇಟು ಹಾಕುವಂತಾಯಿತು. ಈಗ ಪುನಃ ದೇಹದಾನದ ತಿಳುವಳಿಕೆ ಸಾರ್ವಜನಿಕರಲ್ಲಿ ಸದ್ದು ಮಾಡತೊಡಗಿದೆ.



ಸಾಂದರ್ಭಿಕ ಚಿತ್ರ

ಇತ್ತೀಚೆಗೆ ನಮ್ಮ ಸಹೋದರಿ ಶ್ರೀಮತಿ ಹೆಚ್.ಎಂ. ಪುಟ್ಟಮ್ಮ 2 ವರ್ಷಗಳ ಹಿಂದೆ ಅವರ ಪುತ್ರ ಎ.ಎಂ. ಜೈರಾಜ್, 3 ವರ್ಷಗಳ ಹಿಂದೆ ನಮ್ಮ ಮಾವನವರಾದ ಹೆಚ್.ಎಂ. ಮಹಾರುದ್ರಯ್ಯ ಇವರುಗಳು ದೇಹವನ್ನು ಬಾಪೂಜಿ ಹಾಸ್ಪಿಟಲ್ ಅನಾಟಮಿ ವಿಭಾಗಕ್ಕೆ ದಾನ ಮಾಡಿದ್ದಾರೆ. ಕೆಲವು ದಿನಗಳ ಹಿಂದೆ ನಮ್ಮ ಕುಟುಂಬದ ಅಭಿಮಾನಿ, ಪತ್ರಕರ್ತ ಹೆಚ್.ಬಿ. ಮಂಜುನಾಥ ಅವರೂ ಸಹ ದೇಹ ದಾನ ವಿವರಗಳನ್ನು ತಿಳಿಸಿದ್ದಾರೆ.

ನಾನು ಲಯನ್ಸ್ ಕ್ಲಬ್ ವಾಲಂಟರಿ ಬಾಡಿ ಡೊನೇಷನ್ ಡಿಸ್ಟ್ರಿಕ್ಟ್ ಕೋ-ಆರ್ಡಿನೇಟರ್ ಆಗಿ ಸುಮಾರು 100 ಕ್ಕೂ ಹೆಚ್ಚು ದೇಹದಾನಿಗಳನ್ನು ಅನಾಟಮಿ ವಿಭಾಗದಲ್ಲಿ ನೋಂದಾಯಿಸಿದ್ದೇನೆ ಎಂದು ತಿಳಿಸಲು ಹೆಮ್ಮೆ ಎನಿಸುತ್ತದೆ. ಇದರಲ್ಲಿ ನನ್ನನ್ನೂ ಸೇರಿದಂತೆ ನಮ್ಮ ಕುಟುಂಬದವರೇ 20 ಕ್ಕೂ ಹೆಚ್ಚಿದ್ದಾರೆ ಮತ್ತು ವಿವಿಧ ಲಯನ್ಸ್ ಕ್ಲಬ್ ಸದಸ್ಯರುಗಳು ಸುಮಾರು 55 ಜನರಿದ್ದಾರೆ ಹಾಗೂ ಉಳಿದವರು ನಮ್ಮ ಹಿತೈಷಿಗಳು, ಮಿತ್ರರು ಮತ್ತು ಆಸಕ್ತರು ಸುಮಾರು 30 ಜನರಿದ್ದಾರೆ. ಇದರಲ್ಲಿ ದೇಹದಾನ ಮಾಡಿದವರಲ್ಲಿ ಪುರುಷರು ಹಾಗೂ ಮಹಿಳೆಯರೂ ಇದ್ದಾರೆ.

ನಾನು ಡಿಸ್ಟ್ರಿಕ್ಟ್ ಕೋ-ಆರ್ಡಿನೇಟರ್ ಆಗಿ ಸೇರಿ ಸುಮಾರು 10 ವರ್ಷಗಳಾದವು. ನನ್ನ ಸಂಸ್ಥೆ ಲಯನ್ಸ್ ಕ್ಲಬ್‌ನಿಂದ ಹಾಗೂ ಜೆ.ಜೆ.ಎಂ. ಮೆಡಿಕಲ್ ಕಾಲೇಜ್ ವೈದ್ಯಕೀಯ ವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ದೇಹದಾನದ ಅರಿವು, ತಿಳುವಳಿಕೆ ಬಗ್ಗೆ ಅನೇಕ ಕಾರ್ಯಾಗಾರಗಳನ್ನು ಡಾ|| ಮಂಜುನಾಥ ಆಲೂರು, ಡಾ|| ಸಿ.ಎಂ. ರಮೇಶ್, ಡಾ|| ಹೆಚ್.ಬಿ. ಮುರುಗೇಶ್, ಡಾ|| ಮಾವಿಶೆಟ್ರು, ಡಾ|| ಶಿವಲಿಂಗಪ್ಪ, ಡಾ|| ಬಿ.ಎಸ್. ನಾಗಪ್ರಕಾಶ್, ಡಾ|| ನಿರ್ಮಲ ಇವರುಗಳ ಸಹಕಾರದಿಂದ ನೆರವೇರಿಸಲಾಗಿದೆ.

ದೇಹದಾನದ ಬಗ್ಗೆ ನನಗೆ ಯಾಕೆ ಆಸಕ್ತಿ ಬಂದಿದೆ ಎಂದರೆ, ಅದಕ್ಕೆ ಕಾರಣ 'ಸತ್ತ ಮೇಲೆ ಸಮಾಜ ಸೇವೆ' ಎಂಬ ಡಾ|| ನಾಗಲೋಟಿಮಠ ಇವರಿಂದ ರಚಿತವಾದ ಪುಸ್ತಕದಿಂದ ಪ್ರೇರಿತಗೊಂಡು, ನಾವುಗಳು ನಮ್ಮ ನಿಧನ ನಂತರ ದೇಹ ಮಣ್ಣಲ್ಲಿ ಮಣ್ಣಾಗಿ ಹೋಗುವುದಕ್ಕಿಂತ, ದೇಹ ಸುಟ್ಟು ಬೂದಿಯಾಗುವುದಕ್ಕಿಂತ ನಮ್ಮ ದೇಹವನ್ನು ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಜನೆಗೆ ಮೀಸಲು ಇಟ್ಟಲ್ಲಿ ನಮ್ಮ ಜೀವನ ಸಾರ್ಥಕವಾದೀತು ಎಂದು ತಿಳಿದು ಈ ಸೇವೆಗೆ ಕಾರ್ಯಪ್ರವೃತ್ತನಾದೆ. ಒಂದು ದೇಹ 20 ವೈದ್ಯ ವಿದ್ಯಾರ್ಥಿಗಳಿಗೆ ತಮ್ಮ ವಿದ್ಯಾರ್ಜನೆಗೆ ಸಹಾಯಕ ಆಗುತ್ತೆ ಎಂದು ತಿಳಿದುಬಂದಿದೆ.

ಅಲ್ಲದೆ ತಮ್ಮ ಅಂಗಾಂಗ ಕಣ್ಣು, ಯಕೃತ್, ಕಿಡ್ನಿ, ಹೃದಯ, ಚರ್ಮ, ಕರಳು, ಶ್ವಾಸಕೋಶ, ಮೆದೋಜೀರಕ ಗ್ರಂಥಿ, ಕಾರ್ನಿಯಾ ಇವುಗಳನ್ನು ದಾನ ಮಾಡಬಹುದು. ಮಾನವ ದೇಹದ ಅಂಗಾಂಗಗಳಿಂದ 10 ಜನರ ಜೀವ ಉಳಿಸಬಹುದು.

ಹಿಂದೆ ಒಂದು ಕಾಲದಲ್ಲಿ 'ಕನ್ಯಾ ದಾನವೇ ಶ್ರೇಷ್ಠ' ಎಂದಿತ್ತು. ಈಗ ಹಾಗಿಲ್ಲ. ನೇತ್ರದಾನ, ದೇಹದಾನ, ಅಂಗಾಂಗ ದಾನವೇ ಅತ್ಯಂತ ಶ್ರೇಷ್ಠ ದಾನ ಎಂಬಂತಾಗಿದೆ. ನೇತ್ರದಾನದಿಂದ ಇಬ್ಬರ ಬಾಳಿಗೆ ಬೆಳಕಾಗಬಹುದು.

ಒಮ್ಮೆ ಬ್ರೆಜಿಲ್ ಉದ್ಯಮಿ ಘೋಷಣೆ ಮಾಡಿದ "ನಾಳೆ ಬೆಳಿಗ್ಗೆ ಬಹುಕೋಟಿ ಬೆಲೆಬಾಳುವ ಬೆಂಟ್ಲಿ ಕಾರನ್ನು ಹೂಳುತ್ತಿದ್ದೇನೆ. ಮಾರನೆ ದಿನ ಕೆಲವರು ಪುಕ್ಕಟೆ ಹೂಳುವ ಬದಲು ಯಾವುದಾದರೂ ಟ್ರಸ್ಟ್‌ಗೆ ಕೊಡಿ, ಬಡವರಿಗೆ ದಾನ ಮಾಡಿ, ಯಾಕೆ ದುಬಾರಿ ಕಾರನ್ನು ವೇಸ್ಟ್ ಮಾಡ್ತೀರಿ. ಅದಕ್ಕೆ ಆ ಉದ್ಯಮಿ "ಅಲ್ಲಯ್ಯ ಬೆಲೆ ಬಾಳುವ ಕಾರನ್ನು ಹೂಳುತ್ತೇನೆ ಎಂದಾಗ ಇಷ್ಟೆಲ್ಲ ಕಾಳಜಿ ತೋರಿದ ನೀವು, ಇದಕ್ಕಿಂತ ಬೆಲೆ ಕಟ್ಟಲಾಗದ ಅಂಗಾಂಗಗಳನ್ನೇಕೆ ಮಣ್ಣಿನಲ್ಲಿ ವ್ಯರ್ಥ ಮಾಡುತ್ತೀರಿ, ಇದರಿಂದ ಎಷ್ಟು ಸಂತ್ರಸ್ಥರ ಅಮೂಲ್ಯ ಜೀವ ಉಳಿಸಬಹುದು ಎಂದು ಅವರೆಲ್ಲರ ಕಣ್ತೆರೆಸಿದ್ದ.

ಅಂಗಾಂಗ ದಾನಕ್ಕೆ ಈಗಾಗಲೇ 17 ಗಣ್ಯರು ನೋಂದಾಯಿಸಿದ್ದಾರೆ. ಈಗಾಗಲೇ ಕೆಲವು ಪ್ರಮುಖರು ದೇಹದಾನ ಮಾಡಿದ್ದಾರೆ. ಅವರಲ್ಲಿ ಹಿಂದಿ ಖ್ಯಾತ ನಟ ರಾಜಕುಮಾರ್, ಕನ್ನಡ ನಟ ಲೋಕೇಶ್, ಚಿತ್ರನಟಿ ಭಾರ್ಗವಿ ನಾರಾಯಣ, ದಾವಣಗೆರೆ ಖ್ಯಾತ ವರ್ತಕರಾದ ನೀಲಗುಂದ ಮಹೇಶ್ವರಪ್ಪ. ಇತ್ತೀಚೆಗೆ ದೇಹದಾನಕ್ಕೆ ನೋಂದಾಯಿಸಿದವರು ಚಿತ್ರನಟ ಶಿವರಾಜಕುಮಾರ್ ಹಾಗೂ ಚಿತ್ರನಟ ರಾಘವೇಂದ್ರ ರಾಜಕುಮಾರ್, ನೇತ್ರದಾನ ಮಾಡಿದ ಖ್ಯಾತ ನಟ ಪುನೀತ್ ರಾಜಕುಮಾರ್.

ತಮಗೆ ತಿಳಿದಿರುವಂತೆ ಇತ್ತೀಚೆಗೆ ಉಕ್ರೇನ್‌ನಲ್ಲಿ ವಿದ್ಯಾಭ್ಯಾಸಕ್ಕೆ ತೆರಳಿದ್ದ ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲ್ಲೂಕು ಚಳಗೇರಿ ಗ್ರಾಮದ ನವೀನ್ ಮೃತರಾಗಿದ್ದು, ಅವರ ಕುಟುಂಬದವರು ದೇಹದಾನ ಮಾಡಿ ಮಾನವೀಯತೆ ಮೆರೆದು ಇತರರಿಗೆ ಮಾದರಿಯಾದರು.

ದೇವರಲ್ಲಿ ಒಂದು ಅರಿಕೆ, ನಮ್ಮದು ಸಹಜ ಸಾವು ಆಗಿದ್ದಲ್ಲಿ ನಮಗೆ ಸತ್ತ ಮೇಲೆ ಸಮಾಜ ಸೇವೆ ಮಾಡಲು ಅವಕಾಶ ಸಿಗುವುದೆಂದು ನಮ್ಮ ನಂಬಿಕೆ.

**ಸಾರ್ವಜನಿಕರಲ್ಲಿ ಒಂದು ಮನವಿ :** ದೇಹ ದಾನ ಮಾಡಿ, ಅಂಗಾಂಗ ದಾನ ಮಾಡಿ, ನೇತ್ರದಾನ ಮಾಡಿ. ನಮ್ಮ ಮರಣದ ನಂತರ ಸಮಾಜ ಸೇವೆ ಮಾಡಲು ಇತರರಿಗೆ ಪ್ರೇರಣೆಯಾಗಲಿ ಎಂದು ಆಶಿಸುತ್ತೇನೆ.



**- ಟಿ.ಎಂ. ಪಂಚಾಕ್ಷರಯ್ಯ**
ಲಯನ್ಸ್ ಕ್ಲಬ್
ಡಿಸ್ಟ್ರಿಕ್ಟ್ ಕೋ-ಆರ್ಡಿನೇಟರ್,
ವಾಲಂಟರಿ ಬಾಡಿ ಡೊನೇಷನ್.
94492 50881

## ಏಪ್ರಿಲ್ 3ರಂದು ನಗರದಲ್ಲಿ ಪತ್ರಿಕಾ ವಿತರಕರ ರಾಜ್ಯ ಕಾರ್ಯಕಾರಿಣಿ

ದಾವಣಗೆರೆ, ಮಾ.29- ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯ ಕಾರ್ಯಕಾರಿಣಿ ಏಪ್ರಿಲ್ 3ಕ್ಕೆ ನಗರದ ಸುಕೃತೀಂದ್ರ ಕಲಾ ಮಂದಿರದಲ್ಲಿ ನಡೆಯಲಿದೆ ಎಂದು ಒಕ್ಕೂಟದ ರಾಜ್ಯಾಧ್ಯಕ್ಷ ಶಂಭುಲಿಂಗ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸರ್ಕಾರ ಪತ್ರಿಕಾ ವಿತರಕರನ್ನು ನಿರ್ಲಕ್ಷ್ಯ ಮಾಡುತ್ತಿದೆ. 70 ಸಾವಿರ ವಿತರಕರಿದ್ದು, 3.50 ಲಕ್ಷ ಜನರು ಬದುಕಿಗೆ ಆಸರೆಯಾಗಿದೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿರುವ ನಮ್ಮನ್ನು ಸರ್ಕಾರ ಕಡೆಗಣಿಸಿದೆ ಎಂದು ನೋವು ಹಂಚಿಕೊಂಡರು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ಪತ್ರಿಕಾ ವಿತರಕರಿಗೆ ಎರಡು ಕೋಟಿ ರೂ. ಅನುದಾನ ನೀಡಿದ್ದರು. ಈ ಅನುದಾನ ಯಾವ ಇಲಾಖೆಗೆ ಬರುತ್ತದೆ ಎಂದು ಇದುವರೆಗೂ ನಮಗೆ ತಿಳಿದಿಲ್ಲ. ಹಣಕಾಸು ಇಲಾಖೆ, ವಾರ್ತಾ ಇಲಾಖೆ ಮತ್ತು ಮಾಧ್ಯಮ ಅಕಾಡೆಮಿಗಳಲ್ಲಿ ಹೋಗಿ ವಿಚಾರಿಸಿದಾಗ ಈ ಬಗ್ಗೆ ಮಾಹಿತಿ ನೀಡಿಲ್ಲ. ಈಗಾಗಲೇ ಎರಡು ಬಾರಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದರೂ ನಮ್ಮಗಳ ಬಗ್ಗೆ ಗಮನ ಹರಿಸಿಲ್ಲ ಎಂದರು.

ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿಗೆ ಸರ್ಕಾರದಿಂದ 30 ಕೋಟಿ ರೂ. ಪರಿಹಾರ ನೀಡಬೇಕೆಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಕಾರ್ಯಕಾರಿಣಿ ಸಭೆ ನಡೆಸಲಾಗುತ್ತಿದೆ. ಇದರಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ 300ಕ್ಕೂ ಹೆಚ್ಚು ಜನರು ಭಾಗವಹಿಸುತ್ತಾರೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಜಿಲ್ಲಾಧ್ಯಕ್ಷ ಹೆಚ್. ಚಂದ್ರು, ಪದಾಧಿಕಾರಿಗಳಾದ ರಘು ಆಚಾರಿ, ತಿಪ್ಪೇಸ್ವಾಮಿ, ವಾಸು, ಅರುಣ ಕುಮಾರ್, ರಮೇಶ್ ಮತ್ತಿತರರಿದ್ದರು.

## ಮಾಸಾಶನ ಹೆಚ್ಚಳ, ಪುನರ್ವಸತಿ ಬಲಪಡಿಸಲು ಆಗ್ರಹ



**ದೇವದಾಸಿ ಮಹಿಳೆಯರ ಪ್ರತಿಭಟನೆ**

ದಾವಣಗೆರೆ, ಮಾ.29- 2022ರ ರಾಜ್ಯ ಆಯ-ವ್ಯಯದಲ್ಲಿ ದೇವದಾಸಿ ಮಹಿಳೆಯರ ಮಾಸಾಶನದ ಹೆಚ್ಚಳ, ಪುನರ್ವಸತಿ ಯೋಜನೆ ಬಲಪಡಿಸುವುದು ಸೇರಿದಂತೆ ಮತ್ತಿತರೆ ನಮ್ಮ ಹಕ್ಕೊತ್ತಾಯಗಳನ್ನು ಪರಿಗಣಿಸಲು ಆಗ್ರಹಿಸಿ, ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಹಾಗೂ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ, ಮಕ್ಕಳ ಹೋರಾಟ ಸಮಿತಿ ಜಂಟಿಯಾಗಿ ನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿತು.

ಜಿಲ್ಲಾಧಿಕಾರಿ ಕಚೇರಿ ಮೂಲಕ ರಾಜ್ಯ ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಿಗೆ ಮನವಿ ರವಾನಿಸುವಂತೆ ಮನವಿ ಮಾಡಲಾಯಿತು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ದೇವದಾಸಿ ಮಹಿಳೆಯರ ಅನೇಕ ಬೇಡಿಕೆಗಳನ್ನು ಈಡೇರಿಸುವಂತೆ ಈಗಾಗಲೇ ಹಲವು ಬಾರಿ ಕೇಂದ್ರ, ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸಿದ್ದರೂ, ಮನವಿಗೆ ಸ್ಪಂದಿಸಿಲ್ಲ ಎಂದು ಆಕ್ರೋಶ ವ್ಯಕ್ತ ಪಡಿಸಿದರು. ಸರ್ಕಾರ ಎಲ್ಲಾ ದೇವದಾಸಿ ಮಹಿಳೆಯರಿಗೆ ಕನಿಷ್ಠ 3 ಸಾವಿರ ಮಾಸಿಕ ಸಹಾಯಧನ ನೀಡಬೇಕು. ಬಾಕಿ ಹಣ ತಕ್ಷಣವೇ ಬಿಡುಗಡೆ ಮಾಡಬೇಕು. ಗಣತಿಯಲ್ಲಿ ಬಿಟ್ಟು ಹೋದ ಮಹಿಳೆಯರನ್ನು ಸೇರ್ಪಡೆ ಮಾಡಿ ಎಲ್ಲಾ ನೆರವು ಒದಗಿಸಿ, ಪುನರ್ವಸತಿ ಕಲ್ಪಿಸಬೇಕು. ಮದುವೆ ಆದಲ್ಲಿ 5 ಲಕ್ಷ ಪ್ರೋತ್ಸಾಹ ಧನ ನೀಡಬೇಕು. ಯಾವುದೇ ಷರತ್ತುಗಳು ಇರಬಾರದು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಲಾಯಿತು.

ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷೆ ಟಿ.ವಿ. ರೇಣುಕಮ್ಮ, ಜಿಲ್ಲಾಧ್ಯಕ್ಷೆ ಚೆನ್ನಮ್ಮ, ಕಾರ್ಯದರ್ಶಿ ಹಿರಿಯಮ್ಮ, ದೇವೀರಮ್ಮ, ಮೈಲಮ್ಮ, ಕರಿಬಸಮ್ಮ, ಶಾಂತಮ್ಮ, ಭಾಗ್ಯ, ಜ್ಯೋತಿ ಸೇರಿದಂತೆ ಇತರರು ಇದ್ದರು.

## ಜಿಎಂಐಟಿ: 545 ವಿದ್ಯಾರ್ಥಿಗಳು ವಿವಿಧ ಕಂಪನಿಗಳಿಗೆ ಆಯ್ಕೆ

ದಾವಣಗೆರೆ, ಮಾ. 29- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಈ ವರ್ಷದ ಉದ್ಯೋಗ ನೇಮಕಾತಿಯಲ್ಲಿ ದಾಖಲೆಯ 545 ವಿದ್ಯಾರ್ಥಿಗಳು ವಿವಿಧ ಕಂಪನಿಗಳಿಗೆ ಆಯ್ಕೆಯಾಗಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ತಿಳಿಸಿದ್ದಾರೆ.

ಟಿಸಿಎಸ್, ವಿಪ್ರೋ, ಐಬಿಎಂ, ಎಸ್ ಎಲ್ ಕೆ, ಮೈಂಡ್ ಟ್ರೀ, ಹೆಚ್ ಸಿ ಎಲ್ ಟೆಕ್ನಾಲಜೀಸ್, ಟಾಟಾ ಎಲೆಕ್ಸಿ, ರೋಬೋಸಾಫ್ಟ್ ಟೆಕ್ನೋಲಜೀಸ್, ಕ್ಯಾಪ್ ಜಿಮಿನಿ, ಟೆಕ್ ಮಹೀಂದ್ರ, ಸಿಕ್ಸಡಿ ಟೆಕ್ನೋಲಜಿಸ್, ಬೈಜೂಸ್, ಟಾರ್ಗೆಟ್ ಕಾರ್ಪೊರೇಷನ್, ಇವೈ ಟೆಕ್ನಾಲಜೀಸ್, ಎಲ್ ಜಿ ಸಾಫ್ಟ್, ಉಜ್ಜೀವನ್, ಐಸಿಐಸಿಐ ಬ್ಯಾಂಕ್, ಹೆಕ್ಸಾವೇರ್, ಕ್ವಾಲಿಟೆಸ್ಟ್ ಇನ್ನು ಮುಂತಾದ ಪ್ರತಿಷ್ಠಿತ ಕಂಪನಿಗಳಿಗೆ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಕಾಲೇಜಿನ ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥ ತೇಜಸ್ವಿ ಕಟ್ಟಿಮನಿ.ಆರ್. ತಿಳಿಸಿದರು.

ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ವಿಭಾಗದ ಕು. ಬಿಂದುಶ್ರೀ, ಅಮೆರಿಕ ಮೂಲದ ಟಾರ್ಗೆಟ್ ಕಾರ್ಪೊರೇಷನ್ ಕಂಪನಿಗೆ ಆಯ್ಕೆಯಾಗಿದ್ದು, ವಾರ್ಷಿಕ 13.3 ಲಕ್ಷ ರೂಗಳನ್ನು ನೀಡುತ್ತಿದೆ. ಹಾಗೆಯೇ ಲಂಡನ್ ಮೂಲದ ಇವೈ ಪ್ರೈವೇಟ್ ಲಿಮಿಟೆಡ್ ಕಂಪನಿಗೆ 32 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಇನ್ನೂ ಅನೇಕ ಪ್ರತಿಷ್ಠಿತ ಕಂಪನಿಗಳಾದ ಇನ್ಫೋಸಿಸ್, ಸಾಸ್ಕೆನ್ ಕಮ್ಯುನಿಕೇಷನ್, ಡೆಲಾಯ್ಟ್, ಅಪ್ಸ್ಟಾಕ್ಸ್, ಟಿ ಇ ಕನೆಕ್ಟಿವಿಟಿ, ಹರ್ಮನ್ ಕನ್ನೆಕ್ಟೆಡ್ ಸರ್ವೀಸಸ್ ಮುಂತಾದ ಕಂಪನಿಗಳು ಈಗಾಗಲೇ ಸಂದರ್ಶನ ಪ್ರಕ್ರಿಯೆ ಮುಗಿಸಿದ್ದು, ಫಲಿತಾಂಶ ಪ್ರಕಟಿಸಲಿದೆ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಮನೆಯ ರೀ ಪೇಂಟಿಂಗ್**
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: 72046 33302

**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತುಪ್ರಕಾರ ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, ಸಿಂಗಲ್ ಬೆಡ್ ರೂಂ, ಪೂಜಾ ರೂಂ ಇರುವ ಏಳೂವರೆ ಚದುರ ವುಳ್ಳ, 24 ಗಂಟೆ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ ಬಾಡಿಗೆಗಿದೆ. ಸಂಪರ್ಕಿಸಿ.
79750 35395

**ಕೆಲಸಕ್ಕೆ ಬೇಕಾಗಿದ್ದಾರೆ**
Petrol Bunkನಲ್ಲಿ ಕೆಲಸ ಮಾಡಲು ಆಸಕ್ತಿಯುಳ್ಳ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ. IOCL BUNK
94821 09492
94807 77338

**ಬೇಕಾಗಿದ್ದಾರೆ**
ಹೋಟೆಲ್ ಒಂದಕ್ಕೆ ಸಪ್ಲೈಯರ್ ಮತ್ತು ಕ್ಲೀನರ್‌ಗಳು ಬೇಕಾಗಿದ್ದಾರೆ. ಸ್ಥಳ : ಮಾಮಸ್ ಜಾಯಿಂಟ್ ರೋಡ್ ಸಂಪರ್ಕಿಸಿ :
72591 75300
92422 84095

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಹಾಕಲು ಹುಡುಗರು ಬೇಕಾಗಿದ್ದಾರೆ.
ತಕ್ಷಣ ಸಂಪರ್ಕಿಸಿ :
73491 56380

**ಸೈಟುಗಳು ಮಾರಾಟಕ್ಕಿವೆ**
ಹೊಸಬನಶಂಕರಿ ಬಡಾವಣೆಯಲ್ಲಿ 35x50 ಉತ್ತರ, ಪೂರ್ವ ಕಾರ್ನರ್, 30x50 ಪೂರ್ವ, ದಕ್ಷಿಣ ಕಾರ್ನರ್, 40x50 ಉತ್ತರ ಪಶ್ಚಿಮ ಕಾರ್ನರ್, ಬಾಲಾಜಿ ಬಡಾವಣೆಯಲ್ಲಿ 30x50 ಉತ್ತರ ಪೂರ್ವ ಕಾರ್ನರ್.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ನೆಲ ಮಳಿಗೆ ಬಾಡಿಗೆಗೆ ಇದೆ**
ಕೆ.ಟಿ.ಜೆ ನಗರದ 8ನೇ ಕ್ರಾಸ್‌ನಲ್ಲಿ 1600 ಚದರಡಿಯುಳ್ಳ ನೆಲ ಮಳಿಗೆಯು ಕಚೇರಿ ಅಥವಾ ಇನ್ನಿತರೆ ವಾಣಿಜ್ಯೋಪಯೋಗಕ್ಕೆ ಬಾಡಿಗೆಗಿದೆ.
ಸಂಪರ್ಕಿಸಿ: 94484-78786
98867-34802

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್‌ಗಳು ಮತ್ತು ಆಯಾ ಬೇಕಾಗಿದ್ದಾರೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
ಮೊ : 98450-35710

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಕೆಫೆ ಹೋಟೆಲ್‌ನಲ್ಲಿ Part time/Full time ಕೆಲಸ ಮಾಡಲು ಸಹಾಯಕ ಹುಡುಗರು ಬೇಕಾಗಿದ್ದು, ಆಸಕ್ತಿವುಳ್ಳವರು ಸಂಪರ್ಕಿಸಿ :
78922 07248

**TEACHER WANTED**
Teacher (female)
Bharathi Play School KTJ Nagar, DVG.
Play group/LKG/UKG
Qualification : Any Degree with Exellent English Communication with/without Experience
Share resume to below email or Whatsapp
Meritrisebharathi@gmail.com
78992 70110, 78992 70118

**ಮನೆ ಬಾಡಿಗೆಗೆ**
ಜಯನಗರದಲ್ಲಿ 15x40 ವಿಸ್ತೀರ್ಣದ ಮೊದಲ ಮಹಡಿ ಪೂರ್ವ ದಿಕ್ಕಿನಲ್ಲಿರುವ ಮನೆ ಬಾಡಿಗೆಗೆ ಹಾಗೂ ಚಿಕ್ಕ ಮನೆಗಳು ಬಾಡಿಗೆಗೆ ದೊರೆಯುತ್ತವೆ.
ಸಂಪರ್ಕಿಸಿ:
94484 39639

**ಗುಮಾಸ್ತರು ಬೇಕಾಗಿದ್ದಾರೆ**
ಬಂಗಾರದ ಅಂಗಡಿಗೆ ಗುಮಾಸ್ತರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
98444 44772

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಬಳ :10,000
95381 87385, 95352 43598
08192 261003

**ಮಳಿಗೆ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್,
**ರೂಮ್ ಬಾಡಿಗೆಗೆ ಇದೆ**
ಚಾಮರಾಜ ಪೇಟೆ
82177 72482

**ಮಾಂತ್ರಿಕ ಮೋಡಿ ಬೆಟ್ಟಪ್ಪ**
**ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**WANTED**
Experienced Tally Operator. Full Time Job only for male.
70190 73080

**CAR AVAILABLE**
Swift Dzire : BS6 (white Board) Petrol Car available for Personal use. and office use. Model : 2022. if any one interested Contact:
Amith 91085 55051

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000

**ಬೆಣ್ಣೆದೋಸೆ ಹೋಟೆಲ್‌ಗೆ ಅಡುಗೆ ಭಟ್ಟರು ಬೇಕಾಗಿದ್ದಾರೆ**
ಸ್ಥಳ : ಕೊಲ್ಲಾಪುರ
ಸಂಬಳ : 20,000 ದಿಂದ 25,000 ಪ್ರತಿ ತಿಂಗಳಿಗೆ
87886 31191

**ಬೇಕಾಗಿದ್ದಾರೆ**
Call center - Girls
Accountant - Girls
Field Executive - Boys
Sri Kururvatti Basaveshwara Pharma
College Road, P.J. Extn., Davanagere
95139 15520

**ಸೈಟು ಮಾರಾಟಕ್ಕಿವೆ**
RTO ಆಫೀಸ್ ಎದುರುಗಡೆಗೆ 20x30 ಅಲಿನೇಷನ್
93534 88902

**ಬೇಕಾಗಿದ್ದಾರೆ**
NDF Security Solutions India Pvt Ltd., ಎಂಬ ಕಂಪನಿಯಲ್ಲಿ ಅನುಭವವುಳ್ಳ ಸೆಕ್ಯುರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ :
98448 08903, 86603 63094

**ಮನೆ ಮಾರಾಟಕ್ಕಿದೆ**
ಸಿದ್ಧವೀರಪ್ಪ ಬಡಾವಣೆ, 10ನೇ ಕ್ರಾಸ್. ನಂ. 1935/7, 44x60 ಅಳತೆಯಲ್ಲಿ 6 ಬೆಡ್ ರೂಂ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
99007 00091

**WALK-IN-INTERVIEW**
Banking Trainer
Nurse Assistant Trainer
with Teaching Experience. Contact :
VEDANTA FOUNDATION,
Vidyanagar, Ist Bus Stop.
Above Cafe Coffee Day, Davangere.
90360 32079

**ಜೀವನ ಸಂಗಾತಿ**
ಲಿಂಗಾಯತ 51 ವರ್ಷದ, ಉತ್ತಮ ಆದಾಯ ಹೊಂದಿರುವ ಒಳ್ಳೆಯ ವ್ಯಕ್ತಿಗೆ, ಸೂಕ್ತ ಜೀವನ ಸಂಗಾತಿ ಬೇಕಾಗಿದ್ದಾರೆ.
98807 29108

**ಸಾರ್ವಜನಿಕ ಪ್ರಕಟಣೆ**
ಶ್ರೀಕರ ಫೈನಾನ್ಸ್, ಅಶೋಕ ರಸ್ತೆ, ದಾವಣಗೆರೆ ನಮ್ಮ ಫೈನಾನ್ಸ್ ಸಂಸ್ಥೆಯನ್ನು ದಿನಾಂಕ :29.3.2022 ರಿಂದ ಸಂಪೂರ್ಣವಾಗಿ ನಿಲ್ಲಿಸುತ್ತಿದ್ದೇವೆ. ನಾವುಗಳು ಯಾವುದೇ ತರಹದ ಲೇವಾದೇವಿ ವ್ಯವಹಾರವನ್ನು ನಡೆಸುವುದಿಲ್ಲ. ಠೇವಣಿಯನ್ನು ಸಹ ಪಡೆದಿರುವುದಿಲ್ಲ. ಯಾರಿಗಾದರೂ ನಮ್ಮ ಸಂಸ್ಥೆಯ ಮೇಲೆ ತಕರಾರು ಇದ್ದಲ್ಲಿ ಈ ಪ್ರಕಟಣೆಯಾದ 7 ದಿನಗಳ ಒಳಗೆ ತಿಳಿಸತಕ್ಕದ್ದು. ವ್ಯವಸ್ಥಾಪಕ ಪಾಲುದಾರರು ಶ್ರೀಕರ ಫೈನಾನ್ಸ್ (ಎಸ್.ಸಿ. ವಿವೇಕಾನಂದ)

**SBI Life Insurance**
ಕಂಪನಿಯಲ್ಲಿ ವಿಮಾ ಪ್ರತಿನಿಧಿಗಳ ಆಯ್ಕೆ ನಡೆಯುತ್ತಿದೆ. ವಿದ್ಯಾರ್ಹತೆ : ಪದವಿ/ಪಿಯುಸಿ/SSLC ಸೌಲಭ್ಯಗಳು: ತಿಂಗಳಿಗೆ ರೂ. 10,000, ಪೆನ್ಷನ್, ಆಕರ್ಷಕ ಕಮೀಷನ್, ಉಚಿತ ಆರೋಗ್ಯವಿಮೆ, ಉತ್ತಮ ಆದಾಯ ಗಳಿಸುವ ಸುವರ್ಣಾವಕಾಶ. ನಿವೃತ್ತ ನೌಕರರು, ಪಿಗ್ಮಿ ಏಜೆಂಟರು, ಶಿಕ್ಷಕರು, ಗೃಹಿಣಿಯರು, ಸೇಲ್ಸ್ ಎಕ್ಸಿಕ್ಯೂಟಿವ್.
ಸಂಪರ್ಕಿಸಿ :Ravikumar.M.G. Agency Manager SBI Life Insurance DVG
95358 10209

**DENTIST REQUIRED**
To join our team at OM DENTAL CARE, Davanagere.
OM DENTAL CARE
94828 34466
90669 93738

**ಶಿಕ್ಷಕಿಯರು ಬೇಕಾಗಿದ್ದಾರೆ**
ಡಿ ಎಡ್- D ED,
ಬಿಎ, ಬಿಎಡ್- BA BED,
ಬಿಎಸ್‌ಸಿ, ಬಿಎಡ್- BSC,BED.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
94480 21985
90365 59690

**ಮನೆ ಬಾಡಿಗೆಗೆ**
1ನೇ ಫ್ಲೋರ್‌ನಲ್ಲಿ, 3 ಬೆಡ್ ರೂಂ ಹಾಗೂ 2 ಬೆಡ್ ರೂಂ, ಹೊಸ ಮನೆ, ವಿಳಾಸ : ಸಿದ್ಧವೀರಪ್ಪ ಬಡಾವಣೆ, 8 ನೇ ಕ್ರಾಸ್, ಡೋ. ನಂ. 1663/1-2, ಕಲ್ಪವೃಕ್ಷ, ದಾವಣಗೆರೆ.
ಸಂಪರ್ಕಿಸಿರಿ : 70198 78789
(Pets Not Allowed)

**ತಕ್ಷಣವೇ ಬೇಕಾಗಿದ್ದಾರೆ**
ದಾವಣಗೆರೆಯ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಹಾಗೂ ಫೀಲ್ಡ್ ಆಫೀಸರ್‌ಗಳು & ಎಕ್ಸ್-ಸರ್ವಿಸ್‌ಮೆನ್, ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ತಕ್ಷಣವೇ ಸಂಪರ್ಕಿಸಿ : ಆಕರ್ಷಕ ಸಂಬಳ ಹಾಗೂ ESI & PF ಸೌಲಭ್ಯವಿರುತ್ತದೆ.
86603 98210, 63667 28552
96060 50591

**ಸುವರ್ಣಾವಕಾಶ**
ಮನೆಯಲ್ಲೇ ಕುಳಿತು ಫಾರಂನಲ್ಲಿ ಅಂಕಿಗಳನ್ನು ತುಂಬುವ ಕೆಲಸ ವಾರಕ್ಕೆ ಗಳಿಸಿ 3,000-5,000 ಕೋರಿಯರ್ ಸೌಲಭ್ಯವಿದೆ. ಸಂಪರ್ಕಿಸಿ.
95352 48054, 95352 58778

**ಟ್ಯಾಲಿ ಆದವರು ಬೇಕಾಗಿದ್ದಾರೆ**
ನಗರದ ರೈಸ್ ಮಿಲ್‌ನಲ್ಲಿ ದಿನಕ್ಕೆ 2 ತಾಸು ಅಕೌಂಟೆಂಟ್ ಆಗಿ ಕೆಲಸ ಮಾಡಲು ಟ್ಯಾಲಿ ಆದವರು ಬೇಕಾಗಿದ್ದಾರೆ. ಸಂಪರ್ಕಿಸಿ :
94483 45599

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ತಾಲ್ಲೂಕು,ಆಲೂರು ಗ್ರಾಮದಲ್ಲಿ ಸರ್ವೆ ನಂ. 90 ರಲ್ಲಿ 7.03 ಎಕರೆ ಮತ್ತು 1.27 ಗುಂಟೆ, ಜಮೀನು ಮಾರಾಟಕ್ಕಿದೆ.
ಆಸಕ್ತರು ಸಂಪರ್ಕಿಸಿ :
95913 36260

**REQUIRED**
A Liberty Showroom Requires
Sales Executive
Qualification : PUC/Degree
Address - Liberty Showroom
Opp. SS Mall, Shamanur Road, Davangere.
76761 54314

**ಶಿಕ್ಷಕರು ಬೇಕಾಗಿದ್ದಾರೆ**
1st Std to 8th Std ಆಂಗ್ಲ ಮಾಧ್ಯಮ, ಹದಡಿ, ಹಿರೇಮೇಗಳಗೆರೆ, ಕಡರನಾಯಕನಹಳ್ಳಿ. ಹೆಚ್ಚಿನ ಮಾಹಿತಿಗಾಗಿ.
80889 95839
97426 01067

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಮ್ಯಾನುಯಲ್ ಬಿಲ್ ಬರೆಯಲು ಮತ್ತು ಸಾಮಾನು ಕೊಡಲು ಹುಡುಗರು ಬೇಕಾಗಿದ್ದಾರೆ.
ಹರ್ಷ ಹಾರ್ಡ್‌ವೇರ್ & ಪೇಂಟ್ಸ್
(Harsha Hardware & Paints)
ಸುಭಾಷ್ ರಸ್ತೆ, ಅಶೋಕ ಚಿತ್ರ ಮಂದಿರದ ಎದುರು, ರೈಲ್ವೇ ಗೇಟ್ ಹತ್ತಿರ, ದಾವಣಗೆರೆ.

**WANTED**
Banking sector tele caller (Female Only)
Qualification - Any degree / PUC
No. 2257/5 2nd Floor, MCC `A' Block
Beside Togataveera Kalyana Mantapa
96630 72555
Interview time : 11 AM

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**REQUIRED**
Industrial Godown with 20HP Power
Contact :
98452 63579

**UPS BATTERY & RO PURIFIERS**
Sales & Services
PEACE ENTERPRISES
83100 42490, 99013 18277
98801 56667

**SUMMER CAMP FOR KIDS @VETA**
from 4th April. Limited seats
99028 60360
98450 40493

**Dentist Required**
Required dentist on full time basis with attractive salary, intrested candidates can contact :
99005 83966

**ಉಚಿತ ಥೆರಪಿ**
ಬಿಪಿ, ಶುಗರ್, ಥೈರಾಯ್ಡ್ ವೆರಿಕೋಸ್ ವೇನ್, ನಿದ್ರಾಹೀನತೆ, ಮಲಬದ್ಧತೆ, ನರಗಳ ಸೆಳೆತ, ಸೊಂಟ/ಮಂಡಿ ನೋವು,ಗ್ಯಾಸ್ಟ್ರಿಕ್, ಇತರೆ ಯಾವುದೇ ಸಮಸ್ಯೆಗಳಿಗೆ ನೇರ ಪರಿಹಾರ. HOME DEMO ಸೌಲಭ್ಯವಿದೆ.T&C ಲಾಯರ್ ರೋಡ್, ದಾವಣಗೆರೆ.
86602 35013.

**ಕೆಲಸಗಾರರು ಬೇಕಾಗಿದ್ದಾರೆ**
94487 53131

**ಪಾಂಪ್ಲೆಟ್ಸ್ ಹಂಚಲು ಯುವಕ/ಯುವತಿಯರು ಬೇಕಾಗಿದ್ದಾರೆ**
ನೇರ ಪರೀಕ್ಷೆ ಗಳು SSLC, PUC ARTS/COMM/SCI.
last date 30/03. BA, BCOM, NTC - ನರ್ಸರಿ ಟೀಚರ್ಸ್ ಟ್ರೇನಿಂಗ್
ವಿಳಾಸ: ಶ್ರೀ ಗಂಗೋತ್ರಿ ಎಜು ಟ್ರಸ್ಟ್ (ರಿ). ಲಾಯರ್ ರೋಡ್. ದಾವಣಗೆರೆ
86602 35013

**SUMMER TUITIONS**
FOR SSLC/ PCMB / COMM /ARTS/
100 % Results With solved notes.
SINCHANA ACADEMY
Near RAM & Co Circle, Davangere
90195 80600
85532 78258

# ಸಂಸ್ಥೆಗಳ ಮಧ್ಯೆ ಆರೋಗ್ಯಕರ ಪೈಪೋಟಿ ಇರಬೇಕು



**ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ. ಎಚ್.ಎಸ್. ಮಂಜುನಾಥ ಕುರ್ಕಿ**

ದಾವಣಗೆರೆ, ಮಾ.29- 'ದೀಪದಿಂದ ದೀಪವ ಹಚ್ಚಬೇಕು ಮಾನವ' ಎನ್ನುವ ಕವಿವಾಣಿಯಂತೆ, ದೀಪ ಬೆಳಗಬೇಕಾದರೆ ಎಣ್ಣೆ ಬೇಕು. ಆ ಎಣ್ಣೆ ಬತ್ತದಂತೆ ನೋಡಿಕೊಳ್ಳುವುದು ಶಿಕ್ಷಕರ ಜವಾಬ್ದಾರಿಯಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷ ಡಾ. ಎಚ್.ಎಸ್ ಮಂಜುನಾಥ ಕುರ್ಕಿ ನುಡಿದರು.

ಈಗಿನ ಜಗತ್ತು ವ್ಯಾವಹಾರಿಕ, ಸ್ಪರ್ಧಾತ್ಮಕ ಜಗತ್ತು, ರೋಚಕ ಬದಲಾವಣೆಗಳು ವಿಜ್ಞಾನ ಕ್ಷೇತ್ರಗಳಲ್ಲಿ ಆಗುತ್ತಲಿವೆ. ಸಂಸ್ಥೆಗಳ ಮಧ್ಯೆ ಆರೋಗ್ಯಕರ ಪೈಪೋಟಿ ಇದ್ದು, ಗುಣಮಟ್ಟದ ಶಿಕ್ಷಣದ ಜೊತೆಗೆ ಅನುಭವದ ಶಿಕ್ಷಣ- ಅಂದರೆ ಜಗತ್ತಿನ ಹಾಗೂ ಜೀವನದ ಶಿಕ್ಷಣ ನೀಡುವ ಅನಿವಾರ್ಯತೆ ಇದೆ ಎಂದು ಹೇಳಿದರು.

ನಗರದ ಆನಂದ್ ಅಕಾಡೆಮಿ ವತಿಯಿಂದ ಹೋಟೆಲ್ ಅಶೋಕದಲ್ಲಿ ನಿನ್ನೆ ಹಮ್ಮಿಕೊಂಡಿದ್ದ ಪ್ರಾಂಶುಪಾಲರ ವಲಯ ಮಟ್ಟದ ಮೊದಲನೇ ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು.

ಆನಂದ್ ಅಕಾಡೆಮಿಯ ಪರಿಚಯವನ್ನು ಅಕಾಡೆಮಿ ನಿರ್ದೇಶಕ ಕಿರಣ್ ಪೋತಿನ್ ಮಾಡಿದರು. ಅಕಾಡೆಮಿಯ ಶೈಕ್ಷಣಿಕ ಚಟುವಟಿಕೆಗಳ ಪರಿಚಯವನ್ನು ಅಕಾಡೆಮಿಕ್ ಮುಖ್ಯಸ್ಥ ನಾಗಾರ್ಜುನ್ ದುರ್ಬಕುಲ ಅವರು ಮಾಡಿದರು.

ನ್ಯಾಷನಲ್ ಕಾನ್ವೆಂಟ್ ನಿರ್ದೇಶಕರಾದ ಸಹನಾ ಜಿ.ರವಿ, ಬಿ.ಇ.ಎ ಪೌಢಶಾಲೆ ಮುಖ್ಯೋಪಾಧ್ಯಾಯರಾದ ಶ್ರೀಮತಿ ಗಿರಿಜಮ್ಮ ಡಾ. ಎ.ಜೆ. ನಿತ್ಯಾ ಜಿ.ಪಿ.ಜಿ.ಎಂ ನಿರ್ದೇಶಕರು, ಶಿವಕುಮಾರ್ ಕಾರ್ಯದರ್ಶಿಗಳು, ಗೋಲ್ಡನ್ ಪಬ್ಲಿಕ್ ಸ್ಕೂಲ್, ಅವಿನಾಶ್ ಜಿ. ನಾಯ್ ಸ್ಪಡು ಐಕ್ಯೂ ಅಕಾಡೆಮಿ ಅಧ್ಯಕ್ಷರು, ಮೋಕ್ಸ್, ಜೈನ್ ಟ್ರಿನಿಟಿ ಕಾಮರ್ಸ್ ಕಾಲೇಜಿನ ನಿರ್ದೇಶಕರು, ಶ್ರೀಕುಮಾರ್ ಸಾಯಿ ಅಕಾಡೆಮಿ ನಿರ್ದೇಶಕರು ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಆನಂದ್ ಅಕಾಡೆಮಿಯ ಸಂಸ್ಥಾಪಕ ನಿರ್ದೇಶಕ ಆನಂದ್ ಪೋತಿನ್ ಮಾತನಾಡಿ, ತಾವು ಉತ್ತಮ ಸಂಸ್ಕಾರ ಹಾಗೂ ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ತರುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಲಿರುವುದಾಗಿ ತಿಳಿಸಿದರು.

ಸಂಸ್ಥೆಯ ಆಡಳಿತಾಧಿಕಾರಿ ಚಂದ್ರಶೇಖರ್ ಪಿ, ಹಾಗೂ ಲೋಹಿತ್ ಕುಮಾರ್ ಜಿ.ಬಿ ಇವರು ಕಾರ್ಯಕ್ರಮ ನಿರೂಪಿಸಿದರು.

ಸೃಷ್ಟಿ, ಅನುಷ ಹಾಗೂ ಸೌಜನ್ಯ ಇವರಿಂದ ಪ್ರಾರ್ಥನೆ, ಶ್ರೀಕಾಂತ್ ಕೋನಂ ಸ್ವಾಗತಿಸಿದರು. ಶ್ರೀಮತಿ ಸರಿತ ನಿರೂಪಿಸಿದರು, ಗಿರಿಬಾಬು ಸಂಬಂಗಿ ವಂದಿಸಿದರು.

## ಹರಿಹರದಲ್ಲಿ ಇಂದು ಪಂಚಮಸಾಲಿ ಸಮಾಜ ಪೂರ್ವಭಾವಿ ಸಭೆ

ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಆವರಣದಲ್ಲಿ ಏಪ್ರಿಲ್ 23 ಮತ್ತು 24 ರಂದು 75 ನೇ ಸ್ವಾತಂತ್ರ್ಯ ಆಜಾದಿ ಕಾ ಅಮೃತ ಮಹೋತ್ಸವ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ-ಕೌಶಲ್ಯ ಕೃಷಿ ಸಮಾವೇಶ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಪೀಠದ ಆವರಣದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ರಾಜ್ಯಾಧ್ಯಕ್ಷ ಜಿ.ಪಿ. ಪಾಟೀಲ್, ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ. ಲೋಕೇಶ್ ತಿಳಿಸಿದ್ದಾರೆ.

# ಚುನಾವಣೆ : ಬಿಎಸ್‌ವೈ ಜೊತೆ ಅಮಿತ್ ಷಾ ಚರ್ಚೆ



ಬೆಂಗಳೂರು, ಮಾ. 29 - ರಾಜ್ಯ ವಿಧಾನಸಭಾ ಚುನಾವಣೆ ಕುರಿತಂತೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜೊತೆ ಚರ್ಚೆ ನಡೆಸಲಿದ್ದಾರೆ.

ಅಮಿತ್ ಷಾ ಅವರು ಮಾರ್ಚ್ 31 ರಿಂದ ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದು, ಈ ಸಂದರ್ಭದಲ್ಲಿ ಯಡಿಯೂರಪ್ಪ ಅವರೊಂದಿಗೆ ಮುಖಾಮುಖಿ ಚರ್ಚೆ ಮಾಡಲಿದ್ದಾರೆ.

ಏಪ್ರಿಲ್ 1ರಂದು ನಗರದ ತಾಜ್ ವೆಸ್ಟ್‌ಎಂಡ್‌ನಲ್ಲಿ ರಾಜ್ಯ ಬಿಜೆಪಿ ಕೋರ್ ಕಮಿಟಿ ಸದಸ್ಯರ ಜೊತೆ ಚುನಾವಣಾ ಸಂಬಂಧ ಷಾ ಚರ್ಚೆ ಮಾಡಲಿದ್ದಾರೆ. ಇದಾದ ನಂತರ ಅಲ್ಲಿಯೇ ಮಧ್ಯಾಹ್ನ 1-15ರಿಂದ 1-45 ರವರೆಗೂ ಯಡಿಯೂರಪ್ಪ ಅವರ ಜೊತೆ ಚರ್ಚೆ ಮಾಡಲು 30 ನಿಮಿಷಗಳ ಸಮಯವನ್ನು ಪ್ರತ್ಯೇಕವಾಗಿ ನಿಗದಿ ಪಡಿಸಿದ್ದಾರೆ.

ಯಡಿಯೂರಪ್ಪ ಅವರು ಅಧಿಕಾರದಿಂದ ಸ್ವಯಂ ಪ್ರೇರಿತವಾಗಿ ಇಳಿದ ನಂತರ ತಮ್ಮ ಪುತ್ರ ವಿಜಯೇಂದ್ರ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟದಲ್ಲಿ ಮಂತ್ರಿ ಮಾಡಲು ಹಲವಷ್ಟು ಕಸರತ್ತು ನಡೆಸಿದ್ದರು. ಇದು ಸಫಲವಾಗಲಿಲ್ಲ, ಅಷ್ಟೇ ಅಲ್ಲ, ಬಿಜೆಪಿ ರಾಷ್ಟ್ರೀಯ ನಾಯಕರು ತಮ್ಮನ್ನು ಕಡೆಗಣಿಸುತ್ತಿದ್ದಾರೆ ಎಂಬ ಭಾವನೆ ಅವರಲ್ಲಿ ಮೂಡಿತು.

ಪಕ್ಷಕ್ಕೆ ನಾನು ಬೇಡ ಎಂದ ಮೇಲೆ ತಮ್ಮ ಮಕ್ಕಳ ಮುಂದಿನ ರಾಜಕೀಯ ಭವಿಷ್ಯದ ಬಗ್ಗೆ ಹಲವು ಕೋನಗಳಲ್ಲಿ ಯೋಚನೆ ನಡೆಸಿದ್ದರು.

ಕರ್ನಾಟಕದ ಮಟ್ಟಿಗೆ ಯಡಿಯೂರಪ್ಪ ಅವರ ಸಾರಥ್ಯ ಇಲ್ಲದೆ ಬಿಜೆಪಿ ಬಲಾಢ್ಯವಾಗಿ ಚುನಾವಣೆ ಎದುರಿಸಲು ಸಾಧ್ಯವಿಲ್ಲ ಎಂಬುದು ವರಿಷ್ಠರ ಗಮನದಲ್ಲಿದೆ. ಆದರೂ, ಅವರ ಮಕ್ಕಳಿಗೆ ಯಾವುದೇ ಅಧಿಕಾರ ನೀಡಿಲ್ಲ, ಚುನಾವಣಾ ವರ್ಷದಲ್ಲಿ ಅವರನ್ನು ಬದಿಗಿರಿಸಿ ಇತರರ ನಾಯಕತ್ವದಲ್ಲಿ ಚುನಾವಣೆ ಎದುರಿಸುವ ಶಕ್ತಿ ರಾಜ್ಯ ಬಿಜೆಪಿಗಿಲ್ಲ.

ಇದನ್ನು ಮನಗಂಡ ಅಮಿತ್ ಷಾ, ರಾಜ್ಯದ ಯಾವುದೇ ನಾಯಕರೊಂದಿಗೆ ಮುಖಾಮುಖಿ ಚರ್ಚೆಗೆ ಸಮಯ ನೀಡದೆ ಯಡಿಯೂರಪ್ಪ ಅವರೊಂದಿಗೆ ಮಾತ್ರ ಚರ್ಚಿಸಲು ಸಮಯ ನಿಗದಿ ಮಾಡಿದ್ದಾರೆ.

ಬಹುತೇಕ ಮುಂದಿನ ಚುನಾವಣೆ ಬಗ್ಗೆ ಯಡಿಯೂರಪ್ಪ ಅವರಿಂದ ಸಲಹೆ ಸೂಚನೆ ಪಡೆದುಕೊಳ್ಳುವುದು ಮತ್ತು ಕರ್ನಾಟಕದಲ್ಲಿ ಅವಧಿಗೂ ಮುನ್ನ ಚುನಾವಣೆ ಮಾಡಬೇಕೆ ಅಥವಾ ಬೇಡವೇ ಅಥವಾ ನಿಗದಿತ ಸಮಯದಲ್ಲೇ ಚುನಾವಣೆ ಮಾಡಬೇಕೆ ಎಂಬ ಬಗ್ಗೆ ಮಾಹಿತಿ ಪಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

# ಕೊಟ್ಟೂರು: ಆಡಳಿತ ಕಚೇರಿ ಕಟ್ಟಡ ತೆರವಿಗೆ ಪ್ರಸ್ತಾವನೆ






ವಿಜಯನಗರ ಮಾ.29 ವಿಜಯನಗರ ಜಿಲ್ಲೆಯ ಸುಪ್ರಸಿದ್ದ ಶ್ರೀ ಕೊಟ್ಟೂರು ಗುರುಬಸವೇಶ್ವರ ಸ್ವಾಮಿ ದೇವಸ್ಥಾನದ ಗೋಡೆಗೆ ಹೊಂದಿಕೊಂಡು ನಿರ್ಮಿಸಲಾಗಿರುವ ಕಾರ್ಯನಿರ್ವಹಣಾಧಿಕಾರಿಗಳ ಕಛೇರಿಯ ಕಟ್ಟಡವನ್ನು ನೆಲಸಮಗೊಳಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ವಂಶಪಾರಂಪರ್ಯ ಧರ್ಮಕರ್ತ ಟಿ.ಎಚ್. ಎಂ. ಗಂಗಾಧರ ತಿಳಿಸಿ ದ್ದಾರೆ.

ಕೊಟ್ಟೂರಿನಲ್ಲಿ ಮಾತನಾಡುತ್ತಿದ್ದ ಅವರು ಶ್ರೀ ಸ್ವಾಮಿಯ ದೇವಸ್ಥಾನದ ಗೋಡೆಗೆ ಹೊಂದಿಕೊಂಡಿರುವಂತೆ ಆಡಳಿತ ಕಚೇರಿಯನ್ನು ಕಳೆದ ಇಪ್ಪತ್ತು ವರ್ಷಗಳ ಹಿಂದೆ ನಿರ್ಮಿಸಲಾಗಿದೆ. ಇದರಿಂದಾಗಿ ದೇವಸ್ಥಾನ ಸಂಪೂರ್ಣವಾಗಿ ಭಕ್ತರಿಗೆ ಕಾಣಿಸುವುದಿಲ್ಲ. ಈ ಬಗ್ಗೆ ಭಕ್ತಾದಿಗಳಲ್ಲಿ ಅಸಮಾಧಾನ ಇದ್ದು, ಅದನ್ನು ಪರಿಗಣಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸದರಿ ಕಟ್ಟಡವನ್ನು ತೆರವುಗೊಳಿಸಲು ಅಥವಾ ನೆಲಸಮಗೊಳಿಸಲು ಷರತ್ತುಬದ್ಧ ಅನುಮತಿ ಕೋರಲಾಗಿದೆ. ಅಲ್ಲದೆ ಕಾರ್ಯನಿರ್ವಹಣಾಧಿಕಾರಿಗಳ ನೂತನ ಕಚೇರಿ ಕಟ್ಟಡವನ್ನು ನಿರ್ಮಿಸಲು ದೇವಸ್ಥಾನದ ಆವರಣದಲ್ಲೇ ಸ್ಥಳಾವಕಾಶವಿದೆ ಎಂದು ಗಂಗಾಧರ ಹೇಳಿದರು.

**ಪರಭಾರೆಯಾಗದ ಅತಿಥಿ ಗೃಹ :** ಭೂ ಸೇನಾ ನಿಗಮದ ವತಿಯಿಂದ ಮೂರ್ಕಲ್ ಮಠದ ಹಿಂಬದಿಯಲ್ಲಿ ನಿರ್ಮಿಸಲಾಗಿರುವ ಸುಮಾರು 45 ಲಕ್ಷ ರೂ.ಗಳ ವೆಚ್ಚದ ಅತಿಥಿ ಗೃಹದ ಕಾಮಗಾರಿಯನ್ನು ಮುಗಿಸಿ, ದೇವಸ್ಥಾನದ ಆಡಳಿತ ಮಂಡಳಿಗೆ ಪರಭಾರೆ ಮಾಡುವಂತೆ, ಭೂ ಸೇನಾ ನಿಗಮದ ಎಂಜಿನಿಯರ್ ಶಂಕರ್ ನಾಯ್ಕ ಎಂಬುವವರಿಗೆ ತಿಳಿಸಿದ್ದರೂ, ಇದುವರೆಗೂ ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಎಂದು ಸಹಾಯಕ ಆಯುಕ್ತರಾದ ಎಂ.ಎಚ್.ಪ್ರಕಾಶರಾವ್ ಅಸಮಾಧಾನ ವ್ಯಕ್ತಪಡಿಸಿದರು.

ಈಗಾಗಲೇ ನಲವತ್ತೈದು ಲಕ್ಷ ರೂಪಾಯಿಗಳನ್ನು ಭೂ ಸೇನಾ ನಿಗಮಕ್ಕೆ ವರ್ಗಾಯಿಸಲಾಗಿದೆ. ಆದರೂ ಕಾಮಗಾರಿ ಸಂಪೂರ್ಣವಾಗಿ ಮುಗಿಸಿ ತಮಗೆ ಪರಭಾರೆ ಮಾಡಿಲ್ಲ ಎಂದು ಹೇಳುತ್ತಾ, ದೂರದ ಊರುಗಳಿಂದ ಬರುವ ಭಕ್ತರಿಗೆ ಅತಿಥಿ ಗೃಹದ ಸಮಸ್ಯೆ ಇರುವುದರಿಂದ ಆದಷ್ಟು ಬೇಗನೆ ಪೂರ್ಣಗೊಳಿಸುವಂತೆ ಪತ್ರ ಬರೆಯಲಾಗಿದ್ದರೂ ಇದಕ್ಕೆ ಸ್ಪಂದಿಸುತ್ತಿಲ್ಲ. 2 ವರ್ಷಗಳ ಪ್ರಯತ್ನ ವಿಫಲವಾಗಿದೆ. ಅಲ್ಲದೆ ಸಂಬಂಧಿಸಿದ ಭೂ ಸೇನಾ ನಿಗಮದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಿ ಕ್ರಮ ಕೈಗೊಳ್ಳಬೇಕಾಗಿದೆ ಎಂದವರು ಅಭಿಪ್ರಾಯ ಪಟ್ಟರು.

# ರೇಣುಕಾಚಾರ್ಯ ಬಂಧನಕ್ಕೆ ದಸಂಸ ಒತ್ತಾಯ

ದಾವಣಗೆರೆ, ಮಾ.29- ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಪುತ್ರಿ ಚೇತನಾ ಹಾಗೂ ಅಣ್ಣ ಎಂ.ಪಿ. ದಾರುಕೇಶ್ವರಯ್ಯ ಮತ್ತು ಅವರ ಮಕ್ಕಳಿಗೆ ನೀಡಿರುವ ಬೇಡ ಜಂಗಮ ಜಾತಿ ಪ್ರಮಾಣ ಪತ್ರಗಳನ್ನು ಕೂಡಲೇ ರದ್ದುಗೊಳಿಸಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಆಗ್ರಹಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ, ಕುಟುಂಬದ ಸದಸ್ಯರು ಅಕ್ರಮವಾಗಿ ಬೇಡ ಜಂಗಮ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದಿರುವುದರಿಂದ ರೇಣುಕಾಚಾರ್ಯ ವಿರುದ್ಧ ಪರಿಶಿಷ್ಟ ಜಾತಿ ಮತ್ತು ದೌರ್ಜನ್ಯ ತಡೆ ಕಾಯ್ದೆ 1989ರಡಿ ಪ್ರಕರಣ ದಾಖಲಿಸಿಕೊಂಡು ಬಂಧಿಸಬೇಕು ಎಂದು ಒತ್ತಾಯಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ನೈತಿಕ ಹೊಣೆ ಹೊತ್ತು ರೇಣುಕಾಚಾರ್ಯ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ರೇಣುಕಾಚಾರ್ಯ ಹಾಗೂ ಅವರ ಸಹೋದರರು ಹೋಗುವ ಕಡೆಗಳಲ್ಲೆಲ್ಲ ದಲಿತ ಸಂಘರ್ಷ ಸಮಿತಿಯಿಂದ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವುದು ಎಂದು ಎಚ್ಚರಿಸಿದರು.

ದಾರುಕೇಶ್ವರಯ್ಯ ಅವರು ಅಖಿಲ ಕರ್ನಾಟಕ ಡಾ.ಅಂಬೇಡ್ಕರ್ ಬೇಡ ಜಂಗಮ್ ಪರಿಶಿಷ್ಟ ಜಾತಿ ರಕ್ಷಣಾ ವೇದಿಕೆಯನ್ನು ನೋಂದಾಯಿಸಿಕೊಂಡು, ಅಧಿಕಾರಿಗಳ ಮೇಲೆ ರಾಜಕೀಯ ಪ್ರಭಾವ ಬೀರುತ್ತಾ ನೈಜ ಬೇಡ ಜಂಗಮರಿಗೆ ಮೋಸ ಮಾಡಿದ್ದಾರೆ ಎಂದು ದೂರಿದರು.

ಜಿಲ್ಲಾ ಸಂಚಾಲಕ ಕುಂದವಾಡ ಮಂಜುನಾಥ್, ಬಿ.ಎನ್. ಗಂಗಾಧರಪ್ಪ, ಹನುಮಂತಪ್ಪ ಕಾಕರಗಲ್, ಎಸ್. ಫಕೀರಪ್ಪ ಮುಂಡಗೋಡು, ವೆಂಕಟೇಶ್ ಮಂಡ್ಯ, ಮಹಿಳಾ ಒಕ್ಕೂಟದ ರಾಜ್ಯ ಸಂಚಾಲಕರಾದ ರತ್ನಮ್ಮ ಚಿಕ್ಕಬಳ್ಳಾಪುರ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ದಾವಣಗೆರೆ ವಿವಿ ಹಂಗಾಮಿ ಕುಲಪತಿಯಾಗಿ ಪ್ರೊ. ಲಕ್ಷ್ಮಣ್



ದಾವಣಗೆರೆ,ಮಾ.29- ದಾವಣಗೆರೆ ವಿಶ್ವವಿದ್ಯಾನಿಲಯದ ಹಂಗಾಮಿ ಕುಲಪತಿಯಾಗಿ ವಾಣಿಜ್ಯಶಾಸ್ತ್ರ ವಿಭಾಗದ ಡೀನ್ ಹಾಗೂ ಪ್ರಾಧ್ಯಾಪಕ ಪ್ರೊ. ಪಿ. ಲಕ್ಷ್ಮಣ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಲಕ್ಷ್ಮಣ ಅವರನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ಅಧ್ಯಾಪಕರ ವೇದಿಕೆ ವತಿಯಿಂದ ಸನ್ಮಾನಿಸಲಾಯಿತು. ವೇದಿಕೆಯ ಅಧ್ಯಕ್ಷ ಡಾ. ಕರಿಬಸಪ್ಪ ಟಿ, ಕಾರ್ಯದರ್ಶಿ ವೆಂಕಟೇಶ್ ಬಾಬು , ಸಹ ಕಾರ್ಯದರ್ಶಿ ಡಾ.ಮಂಜುನಾಥ್ ಜೆ ಎಮ್, ಖಜಾಂಚಿ ಬಾಬು ಕೆ. ಎ., ಹಿರಿಯ ಪ್ರಾಧ್ಯಾಪಕ ಪ್ರೊ. ಮರುಳಸಿದ್ದಪ್ಪ, ಮುರಿಗೇಂದ್ರಪ್ಪ, ಶಂಕ್ರಯ್ಯ ಪಿ., ರವಿ ಸಿಂಗ್, ರಾಕೇಶ್, ಉಷಾ ಪ್ರಕಾಶ್ ಮತ್ತು ಇತರರು ಉಪಸ್ಥಿತರಿದ್ದರು.

## ಖಾಸಗೀಕರಣ ನಿಲ್ಲಿಸಲು ಆಗ್ರಹ

(1ನೇ ಪುಟದಿಂದ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳಿಂದ ಸೃಷ್ಠಿಯಾಗಿವೆ ಎಂದು ಹೇಳಿದರು.

ಕಾರ್ಮಿಕ ಸಂಘಟನೆಗಳ ಮುಖಂಡರಾದ ಕೈದಾಳೆ ಮಂಜು ನಾಥ್, ಆವರಗೆರೆ ಚಂದ್ರು, ಬಿ. ಆನಂದಮೂರ್ತಿ, ಜಬೀನಾ ಖಾನಂ, ಕರಿಬಸಪ್ಪ, ಶ್ರೀಹರ್ಷ, ಕೆ.ಪಿ. ಮಧುಸೂದನ್, ಆವರಗೆರೆ ವಾಸು, ರಾಜೇಂದ್ರ ಬಂಗೇರ, ಮತ್ತಿತರರು ಮಾತನಾಡಿದರು.

ಪ್ರತಿಭಟನೆಯಲ್ಲಿ ಆನಂದರಾಜ್, ವಿಶ್ವನಾಥ ಬಿಲ್ಲವ, ಎಂ.ಬಿ. ಶಾರದಮ್ಮ, ಸುನೀತ್ ಕುಮಾರ್, ಎಸ್. ನಾಗರಾಜ್, ಐರಣಿ ಚಂದ್ರು, ಆವರಗೆರೆ ರಂಗಸ್ವಾಮಿ, ಸರೋಜಮ್ಮ, ಹೆಚ್.ಎಸ್. ತಿಪ್ಪೇಸ್ವಾಮಿ, ಆರ್. ಆಂಜನೇಯ, ಎಸ್.ಎಸ್. ಮಲ್ಲಮ್ಮ, ಕಾಳಮ್ಮ, ವಿ. ಲಕ್ಷ್ಮಣ, ಭೀಮಾರೆಡ್ಡಿ, ಹನುಮಂತಪ್ಪ, ಕೆ. ಜಯಪ್ಪ ಮತ್ತಿತರರು ಭಾಗವಹಿಸಿದ್ದರು.

## ಮಹಾಪೌರರಿಂದ ಜಿಲ್ಲಾ ಉಸ್ತುವಾರಿ ಸಚಿವರ ಭೇಟಿ



ದಾವಣಗೆರೆ, ಮಾ.29- ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ ಅವರನ್ನು ಮಹಾಪೌರರಾದ ಶ್ರೀಮತಿ ಆರ್.ಜಯಮ್ಮ ಗೋಪಿನಾಯ್ಕ ಮತ್ತು ಬಿಜೆಪಿ ಮುಖಂಡರಾದ ಗೋಪಿನಾಯ್ಕ ಅವರು ಭೇಟಿ ಮಾಡಿ ನಗರದ ಅಭಿವೃದ್ಧಿ ವಿಚಾರಗಳ ಕುರಿತು ಚರ್ಚಿಸಿದರು.

## ಶೇ.70ರ ಮೀಸಲಾತಿಗೆ ನೀತಿ

(1ನೇ ಪುಟದಿಂದ ಗ್ರೂಪ್ 'ಡಿ' ಶ್ರೇಣಿಯಲ್ಲಿ, ಉಳಿದ ಹುದ್ದೆಗಳಲ್ಲಿ ಶೇ.60 ರಷ್ಟು ಅರ್ಹರಿಗೆ ನೀಡಬೇಕಿದೆ. ಮುಂದಿನ ದಿನಗಳಲ್ಲಿ ಈ ನಿಯಮವನ್ನು ಪಾಲನೆ ಮಾಡಲಾಗುವುದು. ಸರೋಜಿನಿ ಮಹಿಷಿ ವರದಿ ಅನ್ವಯ ಸ್ಥಳೀಯರಿಗೆ ಉದ್ಯೋಗ ಸಿಗಬೇಕು ಎಂಬ ಬದ್ಧತೆಯಲ್ಲಿ ರಾಜ್ಯ ಸರ್ಕಾರ ಯಾವುದೇ ರಾಜಿಯಾಗುವುದಿಲ್ಲ ಎಂದು ಸ್ಪಷ್ಟ ಪಡಿಸಿದರು. ಖಾಸಗಿ ಕಂಪೆನಿಗಳು ಉದ್ಯೋಗ ನೇಮಕಾತಿಯಲ್ಲಿ ಪಾರದರ್ಶಕತೆ ಅನುಸರಿಸುತ್ತಿಲ್ಲ. ನೇಮಕಾತಿ ಬಗ್ಗೆ ಪತ್ರಿಕೆಗಳಲ್ಲಿ ಜಾಹೀರಾತು ನೀಡುವಂತೆ ಸರ್ಕಾರ ಸೂಚನೆ ನೀಡಬೇಕು ಎಂದಾಗ, ಸಚಿವರು ಸಾಧ್ಯತೆ ಇರುವ ನಿಯಮಗಳಲ್ಲಿ ಸೂಕ್ತ ಕ್ರಮ ಜರುಗಿಸುವುದಾಗಿ ಭರವಸೆ ನೀಡಿದರು.

## ಜಗಳೂರಿನಲ್ಲಿ ಇಂದು ನಿವೃತ್ತ ಯೋಧರಿಗೆ ಸನ್ಮಾನ

ಲಯನ್ಸ್ ಕ್ಲಬ್, ಜಗಳೂರು ಅಮ್ಮ ಲೈನ್ಸ್ ಕ್ಲಬ್ ಇವರ ಆಶ್ರಯದಲ್ಲಿ ಜಿಲ್ಲಾ ಲಯನ್ಸ್ ರಾಜ್ಯಪಾಲರಾದ ವಿಶ್ವನಾಥ ಶೆಟ್ಟಿ ಅವರ ಅಧಿಕೃತ ಭೇಟಿಯ ನಿಮಿತ್ತ ಸೇವಾ ಕಾರ್ಯದ ಅಂಗವಾಗಿ ನಿವೃತ್ತ ಯೋಧರನ್ನು ಸನ್ಮಾನಿಸುವ ಸಮಾರಂಭವನ್ನು ಇಂದು ಬೆಳಗ್ಗೆ 11 ಗಂಟೆಗೆ ಜೆ.ಎಂ.ಇಮಾಮ್ ಶಾಲೆ ಆವರಣದಲ್ಲಿ ಏರ್ಪಡಿಸಲಾಗಿದೆ. ಉದ್ಘಾಟನೆ : ವಿಶ್ವನಾಥ್ ಶೆಟ್ಟಿ. ಅಧ್ಯಕ್ಷತೆ : ಎನ್.ಟಿ. ಎರ್ರಿಸ್ವಾಮಿ, ಮುಖ್ಯ ಅತಿಥಿಗಳು : ಜಯಪ್ರಕಾಶ್ ಭಂಡಾರಿ, ಇ. ಎಂ. ಮಂಜುನಾಥ, ಎಸ್. ವೆಂಕಟಾಚಲಂ, ಎ.ಆರ್. ಉಜ್ಜಿನಪ್ಪ, ಎಚ್.ಎನ್. ಶಿವಕುಮಾರ್, ಹುಸೇನಸಾಬ್ ಮತ್ತು ಇತರರು.

## ನಗರದಲ್ಲಿ ಇಂದು ದಲಿತ ಸಂಘರ್ಷ ಸಮಿತಿ ಸಭೆ

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯಮಟ್ಟದ ಸಭೆ ಇಂದು ಬೆಳಿಗ್ಗೆ 11.30 ಕ್ಕೆ ರೋಟರಿ ಬಾಲ ಭವನದ ಸಿ. ಕೇಶವಮೂರ್ತಿ ಸಭಾಂಗಣದಲ್ಲಿ ನಡೆಯಲಿದೆ. ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್ ಅಧ್ಯಕ್ಷತೆ ವಹಿಸುವರು. ರಾಜ್ಯ ಸಂಘಟನಾ ಸಂಚಾಲಕರಾದ ವಿಜಯನರಸಿಂಹ, ಎಸ್.ಎನ್. ಮಲ್ಲಪ್ಪ, ಮರೀಶ್ ನಾಗಣ್ಣನವರ್, ಸೂಲಿಕುಂಟೆ ರಮೇಶ್, ಪಿ.ಎಸ್. ಭೀಮಜ್ಯೋತಿ ಸೀನು, ಜೆ. ಶ್ರೀನಿವಾಸಲು, ಎಸ್. ವಿಘ್ನೇಶ್ ಬಳ್ಳಾರಿ, ರಾಜ್ಯ ಖಜಾಂಚಿ ಸತ್ಯ ಭದ್ರಾವತಿ-ವಿಭಾಗೀಯ ಸಂಚಾಲಕ ಗುರುರಾಜ್ ಸೊರಬ ಮತ್ತು ಇತರರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

## ಹರಿಹರದಲ್ಲಿ ಇಂದು ಬಜೆಟ್ ಸಭೆ

ಹರಿಹರ ನಗರಸಭೆ ಅಧ್ಯಕ್ಷರಾದ ಶ್ರೀಮತಿ ಜಾಹೀರಾಬಾನು ದಾದಾಪೀರ್ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಗರಸಭೆ ಕೌನ್ಸಿಲ್ ಸಭಾಂಗಣದಲ್ಲಿ ಈ ಸಾಲಿನ ಆಯ-ವ್ಯಯ ವಿಶೇಷ ಸಾಮಾನ್ಯ ಸಭೆ ಕರೆಯಲಾಗಿದೆ.

# ರಾಜನಹಳ್ಳಿ ಶ್ರೀಗಳ ಧರಣಿ ಸತ್ಯಾಗ್ರಹ : ಇಂದು ವಿಶೇಷ ಸಭೆ




ಬೆಂಗಳೂರು, ಮಾ.29- ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗದ ವರದಿ (ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳ) ಅನುಷ್ಠಾನಕ್ಕೆ ಒತ್ತಾಯಿಸಿ, ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹವು ಮಂಗಳವಾರ 48 ನೇ ದಿನಕ್ಕೆ ಕಾಲಿಟ್ಟಿದೆ.

ಈ ದಿನದ ಧರಣಿಯಲ್ಲಿ ಪಾಲ್ಗೊಂಡಿದ್ದ ಮಾಜಿ ಸಚಿವ ಹಾಗೂ ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಮಾತನಾಡಿ, ಸಂವಿಧಾನದ ಆಶಯಗಳನ್ನು ಈಡೇರಿಸಬೇಕಾದ ಜವಾಬ್ದಾರಿ ಆಳುವ ಸರ್ಕಾರದ್ದಾಗಿರುತ್ತದೆ. ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳ ಆಗಲೇಬೇಕೆಂದು ಒತ್ತಾಯಿಸಿದರು.

ಮಾಜಿ ಸಚಿವ ಹೆಚ್.ಕೆ. ಪಾಟೀಲ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ, ಶಾಸಕರಾದ ಈ. ತುಕಾರಾಂ, ಚಳ್ಳಕೆರೆ ರಘುಮೂರ್ತಿ, ಮಾಜಿ ಶಾಸಕರಾದ ಡಿ.ಆರ್. ಪಾಟೀಲ್, ರಾಮಕೃಷ್ಣ, ಅರಣ್ಯ ನಿಗಮದ ಮಾಜಿ ಅಧ್ಯಕ್ಷ ಟಿ. ಈಶ್ವರ್, ಹರ್ತಿಕೋಟೆ ವೀರೇಂದ್ರ ಸಿಂಹ, ಸಿರಿಗೆರೆ ತಿಪ್ಪೇಶ್, ಬಸವರಾಜ ನಾಯಕ, ಚಳುವಳಿ ರಾಜಣ್ಣ ಸೇರಿದಂತೆ, ಇನ್ನೂ ಅನೇಕರು ಭಾಗವಹಿಸಿದ್ದರು.

ಸೋಮವಾರ ಸಚಿವ ಮುರುಗೇಶ್ ನಿರಾಣಿ ಪಾಲ್ಗೊಂಡು ಶ್ರೀಗಳಿಗೆ ಬೆಂಬಲ ನೀಡಿದರು.

**ವಿಶೇಷ ಸಭೆ :** ಶ್ರೀಗಳ ಧರಣಿ ಸತ್ಯಾಗ್ರಹ 48ನೇ ದಿನಕ್ಕೆ ಕಾಲಿಟ್ಟಿದ್ದರೂ ರಾಜ್ಯ ಸರ್ಕಾರ ಇದುವರೆಗೆ ಯಾವುದೇ ಕ್ರಮ ಕೈಗೊಳ್ಳದಿರುವ ಹಿನ್ನೆಲೆಯಲ್ಲಿ ನಾಳೆ ದಿನಾಂಕ 30 ರ ಬುಧವಾರ ಸಂಜೆ 5 ಗಂಟೆಗೆ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಮಟ್ಟದ ಎಸ್ಸಿ-ಎಸ್ಟಿ ಸಮಾಜಗಳ ಗುರುಗಳ ಮತ್ತು ಮುಖಂಡರ, ಹೋರಾಟಗಾರರ, ವಿವಿಧ ಸಂಘಟನೆಗಳ ಮುಖ್ಯಸ್ಥರ ವಿಶೇಷ ಸಭೆಯನ್ನು ಕರೆಯಲಾಗಿದೆ ಎಂದು ಶ್ರೀ ವಾಲ್ಮೀಕಿ ಗುರುಪೀಠದ ಪ್ರಕಟಣೆಯಲ್ಲಿ ತಿಳಿಸಿದೆ.

## ಎಸ್ಸಿ, ಎಸ್ಟಿ ಸಮಾಜದ ಮುಖಂಡರ ವಿಶೇಷ ಸಭೆಗೆ ಆಗಮಿಸಲು ವೀರಣ್ಣ ಕರೆ



ಎಸ್‌ಸಿ ಎಸ್‌ಟಿ ಮೀಸಲಾತಿ ಹೆಚ್ಚಳ ಮತ್ತು ಇನ್ನಿತರೆ ಬೇಡಿಕೆಯಡಿ ಶ್ರೀ ಜಗದ್ಗುರು ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಯವರು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸ್ಥಳದಲ್ಲಿ ಇಂದು ಸಂಜೆ 5 ಗಂಟೆಗೆ ಸಮಾಜದ ಮುಖಂಡರ ವಿಶೇಷ ಸಭೆಯನ್ನು ಕರೆಯಲಾಗಿದೆ. ವೈಯಕ್ತಿಕವಾಗಿ ದೂರವಾಣಿ ಕರೆ ನಿರೀಕ್ಷಿಸದೆ, ಜಿಲ್ಲೆಯ ಎಲ್ಲಾ ಮುಖಂಡರು, ಈ ಸಭೆಯಲ್ಲಿ ಭಾಗವಹಿಸಿ ಹೋರಾಟಕ್ಕೆ ಬೆಂಬಲಿಸಿ ಸಹಕರಿಸಬೇಕೆಂದು ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ.ವೀರಣ್ಣ ಕೋರಿದ್ದಾರೆ.

## ಒಂದು ರಾಜ್ಯ ಒಂದು ಕ್ರೀಡೆ

(1ನೇ ಪುಟದಿಂದ ಪ್ರಮಾಣಿಕ್, ರಾಜ್ಯಗಳ ಕ್ರೀಡಾ ಸಚಿವರು ಹಾಗೂ ಅಧಿಕಾರಿಗಳ ಜೊತೆ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು ಆನ್‌ಲೈನ್ ಮೂಲಕ ಸಭೆ ನಡೆಸಿದ್ದಾರೆ. ಸೂಕ್ತ ಸಮಯದಲ್ಲಿ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದೆ ಎಂದಿದ್ದಾರೆ.







## ಕ್ರೀಡಾ ಸರಕುಗಳ ಮೇಲೆ ಶೇ.5ರ ಜಿಎಸ್‌ಟಿಗೆ ಒತ್ತಾಯ

ನವದೆಹಲಿ, ಮಾ. 29 – ಕ್ರೀಡಾ ಸರಕುಗಳ ಮೇಲೆ ಏಕರೂಪದ ಶೇ.5ರ ತೆರಿಗೆ ವಿಧಿಸಬೇಕೆಂದು ಹಣಕಾಸು ಸಚಿವಾಲಯಕ್ಕೆ ಕೇಂದ್ರ ಕ್ರೀಡಾ ಸಚಿವಾಲಯ ಒತ್ತಾಯಿಸಿದೆ.

ಈ ಬಗ್ಗೆ ಲೋಕಸಭೆಯಲ್ಲಿ ಹೇಳಿಕೆ ನೀಡಿರುವ ಕೇಂದ್ರ ಕ್ರೀಡಾ ಖಾತೆ ಅಧೀನ ಸಚಿವ ನಿಸಿತ್ ಪ್ರಮಾಣಿಕ್, ಜಿ.ಎಸ್‌.ಟಿ. ಮಂಡಳಿಯ ಶಿಫಾರಸ್ಸಿನ ಆಧಾರದ ಮೇಲೆ ತೆರಿಗೆ ನಿಗದಿ ಪಡಿಸಲಾಗುತ್ತದೆ. ಬಹುತೇಕ ಕ್ರೀಡಾ ಉಪಕರಣಗಳ ಮೇಲೆ ಶೇ.12 ಜಿ.ಎಸ್‌.ಟಿ. ಇದೆ ಎಂದು ತಿಳಿಸಿದ್ದಾರೆ.

ಕೆಲವೇ ಆಯ್ದ ಕ್ರೀಡಾ ಉಪಕರಣಗಳ ಮೇಲೆ ಶೇ.18ರ ತೆರಿಗೆ ಇದೆ ಎಂದವರು ಹೇಳಿದ್ದಾರೆ.

## ಏಪ್ರಿಲ್ 2 ರಂದು ಚಂದ್ರ ದರ್ಶನ

ಹೊನ್ನಾಳಿ, ಮಾ.29- ಏಪ್ರೀಲ್ 1 ರ ಶುಕ್ರವಾರ ಅಮಾವಾಸ್ಯೆ ಪೂಜೆ ಹಾಗೂ ಏಪ್ರಿಲ್ 2 ರ ಶನಿವಾರದಂದು ಚಂದ್ರ ದರ್ಶನವಾಗಲಿದೆ ಎಂದು ಪುರೋಹಿತರಾದ ಹೊನ್ನಾಳಿಯ ಎಂ.ಎಸ್.ಶಾಸ್ತ್ರಿ ಹೊಳೆಮಠ್ ತಿಳಿಸಿದ್ದಾರೆ.

ಮಾರ್ಚ್ 31 ರ ಗುರುವಾರ ಮಧ್ಯಾಹ್ನ 12.05ಕ್ಕೆ ಅಮಾವಾಸ್ಯೆ ಪ್ರಾರಂಭವಾಗಲಿದ್ದು, ಏಪ್ರಿಲ್ 1 ರ ಶುಕ್ರವಾರ ಮಧ್ಯಾಹ್ನ 12 ಕ್ಕೆ ಮುಗಿಯಲಿದೆ, ಏಪ್ರಿಲ್ 2 ರ ಶನಿವಾರದಂದು ಬೆಳಿಗ್ಗೆ 11. 58ಕ್ಕೆ ಯುಗಾದಿ ಪಾಡ್ಯ ಮುಕ್ತಾಯವಾಗುತ್ತದೆ. ಅಭ್ಯಂಗ ಸ್ನಾನ ಬೇವು, ಬೆಲ್ಲ ಸಿಹಿ-ಕಹಿ ಸವಿದು ಆಚರಣೆ ಮಾಡಿ, ಏಪ್ರಿಲ್ 2 ರ ಶನಿವಾರ ನೂತನ ಶುಭಕೃತ ನಾಮ ಸಂವತ್ಸರವು ಆರಂಭಗೊಳ್ಳಲಿದ್ದು, ಏಪ್ರಿಲ್ 2 ರ ಶನಿವಾರ ಸಂಜೆ ಚಂದ್ರದರ್ಶನವಾಗಲಿದೆ ಎಂದು ತಿಳಿಸಿದರು.


































JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte